J.P.W

Note Book



Pages 80



JAI HIND PRINTING & BINDING WORKS,
MAMULPET, BANGALORE-2

ಬ್ರಹ್ಮವು ಆತ್ಮ. ಆ ಆತ್ಮನೇ ಅವಿದ್ಯೆಗೆ ವಿಷಯ. ಮತ್ತೆ ಆಶ್ರಯ
ಇದು. ವಾರ್ತಿಕಕಾರರು = ವ್ಯವಹಾರದೃಷ್ಟಿ.

ಪರಮಾರ್ಥ — ಬ್ರಹ್ಮವು ಅವಿದ್ಯಾಶ್ರಯ ವಿಷಯವಲ್ಲ — ಸಿದ್ಧಾಂತ.

॥ ಓಂ ಸದ್ಗುರು ಚಿದಾನಂದ ಪರಬ್ರಹ್ಮಣೇ ನಮಃ ॥

ಆತ್ಮನು = ಸತ್ಯ, ವಿಷಯಿ, ಸ್ವತಂತ್ರ, ಚೇತನ, ಅವಿಕಾರೀ, ಜ್ಞಾನಜ್ಯೋತಿ, ಆನಂದ
ಅನಾತ್ಮವು = ಮಿಥ್ಯೆ ವಿಷಯ, ಪರತಂತ್ರ, ಜಡ, ವಿಕಾರೀ, ಅಚೇತನ, ದುಃಖರೂಪ.

ಎಂದೆಂದಿಗೂ ಸ್ವರೂಪಬದಲಾವಣೆಯಿಲ್ಲದ ಪರಮವಸ್ತುವೇ ಸತ್ಯವು.
ತಾತ್ತ್ವಿಕಸ್ವರೂಪವಿಲ್ಲದೇ ವ್ಯವಹಾರದಲ್ಲಿ ತೋರುವ (ಪ್ರಾತಿಭಾಸಿಕ) ವಸ್ತುವು ಮಿಥ್ಯೆ.
ತಾತ್ತ್ವಿಕಸ್ವರೂಪವುಳ್ಳ ಸತ್ಯಾತ್ಮವು ಎಂದೆಂದೂ ಸ್ವರೂಪವಿಲ್ಲದಾಗುವುದಿಲ್ಲ.
ಮಿಥ್ಯಾತ್ಮವಾದ ಅಂದರೆ ತೋರುಗಾಣಿಕೆಯ ರೂಪವುಳ್ಳ ದೇಹಾದಿಜಗತ್ತು = ವಿಷಯ
ರಾಶಿಯು ಎಂದೆಂದೂ ಸತ್ಯವಲ್ಲ. ಸ್ವರೂಪಬದಲಾವಣೆಯುಳ್ಳದ್ದಾಗಿರುತ್ತೆ.
ಬೆಳಕು ಎಂದೂ ಕತ್ತಲೆಯಲ್ಲ. ಕತ್ತಲೆಯು ಎಂದಿಗೂ ಬೆಳಕಲ್ಲ. ಅಥವಾ ಹಾಗೆ
ಪರಸ್ಪರ ಪರಿಣಾಮವಾಗಲೀ ಬದಲಾವಣೆಯಾಗಲೀ ಉಂಟೇ? ಇಲ್ಲವೇ ಇಲ್ಲ.
ಹಾಗೆಯೇ ಪರಸ್ಪರ ವಿರುದ್ಧಸ್ವಭಾವದ ಆತ್ಮ ಮತ್ತು ಅನಾತ್ಮ ವಸ್ತುಗಳ ಯಥಾ
ರ್ಥ ಸ್ವರೂಪಜ್ಞಾನ-ನಿರ್ಣಯ-ಮಾಡಿಕೊಳ್ಳದೇ ಲೋಕದ ವ್ಯವಹಾರವು ನಡೆಯುತ್ತಿದೆ.

ಸ್ವಾಭಾವಿಕವಾಗಿ ಅಂದರೆ ನೈಸರ್ಗಿಕವಾಗಿ ವ್ಯವಹಾರ ತಾತ್ಪರ್ಯವುಳ್ಳ
ಜನರಿಗೆ ತಮ್ಮ ಲೋಕಯಾತ್ರೆಗೆ ಬೇಕಾದಷ್ಟು ಮಾತ್ರ ಆದರೆ ಸಾಕು. ಅಂದರೆ
ಅವರಿಗೆ ವ್ಯವಹಾರಜ್ಞಾನ, ವ್ಯವಹಾರಕೌಶಲ್ಯ ಇಷ್ಟು ಬೇಕು. ಅದನ್ನೆಲ್ಲಾ
ಅಪರವಿದ್ಯೆ ಎಂಬ ಹೆಸರಿನ ಜ್ಞಾನವಿಜ್ಞಾನಗಳು ಪೂರೈಸಿಕೊಡುತ್ತವೆಯಾದ್ದ
ರಿಂದ ಜನರು ಅದನ್ನು ಸೇವಿಸುವರು. ಅದಕ್ಕೆ ಮೇಲಿನ ಪರವಿದ್ಯೆ - ಆ
ಧ್ಯಾತ್ಮವಿಜ್ಞಾನದ ತಂಟೆಗೆ ಹೋಗುವುದಿಲ್ಲ. ಆತ್ಮವಸ್ತುವು ಲೋಕವ್ಯವ
ಹಾರಕ್ಕೆ ವಿಷಯವಲ್ಲದ್ದರಿಂದ ಅದರ ಜ್ಞಾನವಿಲ್ಲದ್ದು ಕೊರತೆ ಎನಿಸುವುದೂ
ಇಲ್ಲ / ಆದರೆ ಸಕಲವಸ್ತು ಮತ್ತು ವ್ಯವಹಾರಕ್ಕೂ ಆತ್ಮಚೇತನವೇ ಮೂಲವಾದದ್ದು.
ಆದಾಗ್ಯೂ ಆತ್ಮದ ಹಂಗಿಲ್ಲದೇ ವ್ಯವಹಾರ ನಡೆಯುತ್ತದೆ ಎಂದುಕೊಳ್ಳಬಾರದು. ಇದು ಸುಖ
ಇದು ದುಃಖ ಎಂಬ ಅ[illegible]ವಾಗಬೇಕಾದರೆ ಒಂದು ಮೂಲಾಧಾರವು ಬೇಕೇ ಬೇಕಲ್ಲ.

ಈ ವಿಷಯವು ಹೇಗೆ ತಿಳಿಯುವುದೆಂದರೆ ಆತ್ಮಸ್ವರೂಪವನ್ನು ಪೂರ್ಣವಾಗಿ ತಿಳಿದುಕೊಂಡರೆ ಆ ಬ್ರಹ್ಮಸ್ವರೂಪವಾದ ಆತ್ಮನಲ್ಲಿ ಯಾವ ತರಹ ವಂಚಿತದ ಪರಿಮಾಣಗಳು ಭೇದಗಳು ಇಲ್ಲದಿರುವುದು ಖಚಿತವಾಗುವುದು ಆದ್ದರಿಂದ ವ್ಯಾಪ್ತಿ ಎನ್ನುವರು.

ಅನಾತ್ಮಕಗಳಾದ ದೇಹಾದಿಗಳು ಜಡವಾದವುಗಳು ಇಂದ ಮೇಲೆ - ಆತ್ಮನ ಸ್ಫೂರ್ತಿ-ಅನುಭವಗಳಿ ಬಿಟ್ಟು ಇವುಗಳ ವ್ಯವಹಾರವಾಗಲೀ ಸ್ಥಿತಿಯಾಗಲೀ ಉಂಟೇ? ಇಲ್ಲ. ಇಂದ ಮೇಲೆ ಈ ಸಮಸ್ತ ವಿಷಯರಾಶಿಯೂ - ಮನ ಆದಿ ಅಂತರಂಗ ಬಹಿರಂಗಗಳು ಆತ್ಮನನ್ನೇ ಕೇಂದ್ರವಾಗಿ ಉಳ್ಳ ನಾಮರೂಪಾಂತರಗಳು ಎಂಬಾಯಿತು ವಸ್ತುಗಳು ಮತ್ತು ವ್ಯವಹಾರಗಳು, ಆ ಆತ್ಮನೇ ಅಧ್ಯಕ್ಷನು. ಇವನಿಗೆ ಯಕ್ಷದ್ದೆಲ್ಲವೂ ಶೇಷವು. ಉಪಕರಣವು ಸಂಸಾರ ಸಲಕರಣೆ. ಈ ವಿಷಯಾನುಭವವೇ ಸಂಸಾರವು.

ಆತ್ಮನು ಸರ್ವದಾ ಸರ್ವವನ್ನು ವ್ಯಾಪಿಸಿರುತ್ತಾನೆ. ಆತ್ಮನಿಲ್ಲದ ದೇಶ ಕಾಲಗಳೇ ಇಲ್ಲ. ಆದ್ದರಿಂದ ಸತ್ಯಸ್ವರೂಪವಾದ ಆತ್ಮಚೈತನ್ಯವು ಸ್ವರೂಪದಿಂದ ಹಿಡಿದು ಸೂಕ್ಷ್ಮ ಸ್ಥೂಲ ಪರ್ಯಂತವಾಗಿ ಇಂದರೆ ಬುದ್ಧಿ ಮನ ಅಹಂಕಾರ ತತ್ವ ಪ್ರಾಣ ಇಂದ್ರಿಯಗಳು ಮತ್ತು ದೇಹ ಇಷ್ಟನ್ನು ಸರ್ವದಾ ವ್ಯಾಪಿಸಿಯೇ ಇರುತ್ತಾನೆ. ಹಾಗು ತತ್ತ್ವಮಯನೇ ಆಗಿರುತ್ತಾನೆ (ಆತ್ಮತತ್ವ ಹೊರತು ಬೇರೆ ತತ್ವವೇ ಇರುವುದಿಲ್ಲವಷ್ಟೆ.) ಹೀಗೆ ಜಡ ಮತ್ತು ಚೈತನ್ಯ ಇವೆರಡೂ ಕೂಡಿಕೊಂಡೇ ಇರುವುದು ಲೋಕಸ್ವಭಾವ. ಆದ್ದರಿಂದಲೇ ಜಡದಲ್ಲಿಯೂ ಚೈತನ್ಯ/ಬುದ್ಧಿಯುಂಟಾಗುತ್ತಿರುವುದು. ನಾನು ನೋಡುತ್ತೇನೆ ಎನ್ನುತ್ತಾರೆ. ನೋಡುವುದು ಕಣ್ಣು-ಇಂದ್ರಿಯ ಜಡ. ನೋಡುವ ಕಾರ್ಯವು ನಿಜವಾಗಿ ಚೈತನ್ಯವುಳ್ಳ ನಾನು ಎಂಬ ವಸ್ತುವಿಗೆ ಸಂಬಂಧಪಟ್ಟದ್ದು. ನಾನು ಎಂಬ ಅಂತಸ್ಸಾಕ್ಷಿ ವಸ್ತುವಿಗೆ ಕಣ್ಣು ಎಂಬ ಇಂದ್ರಿಯವಿರುವುದಿಲ್ಲ. ಈ ರೀತಿ ಜಡ ಜಡಕಾರ್ಯ-ಚೇತನ ಚೇತನಕಾರ್ಯ ಇವೇನನ್ನು ವಿವೇಚನೆ ಮಾಡಿಕೊಳ್ಳದೇ ಈ ವ್ಯವಹಾರ ಪರಂಪರೆಯು ನಡೆಯುತ್ತಿರುವುದು. ಇದು ಸಂಸಾರ.

ಆತ್ಮಸ್ವರೂಪವನ್ನು ಕಂಡುಹಿಡಿಯಬೇಕಾದರೆ ಸ್ವತಃ ಶಕ್ಯವಿಲ್ಲ. ಮನಆದಿ ಇಂದ್ರಿಯ
ಗ್ರಾಹ್ಯ ಬಹಿರ್ಮುಖಗಳಾಗಿರುತ್ತವೆ. ಅವು ಆತ್ಮನನ್ನು ವಿಷಯಮಾಡಿಕೊಳ್ಳಲಾರವು.
ಕೇವಲ ತರ್ಕಯುಕ್ತಿಗಳಿಂದಲೂ ಸಾಧ್ಯವಿಲ್ಲ. ಮತ್ತೇನೆಂದರೆ ಶಾಸ್ತ್ರ ಮತ್ತು
ಗುರುವಿನದೇ ಶರಣಗತಿ. ಗುರುವು - ವೇದವು ಎಚ್ಚರಿಕೆ ಕೊಡುವುದೇನೆಂದರೆ -:

ಬುಭುಕ್ಷು - ಮುಮುಕ್ಷು ಎಂದು ಜನ ಎರಡು ಬಗೆ.
ಬುಭುಕ್ಷು ಅಂದರೆ ಭೋಗ ಅಪೇಕ್ಷೆಯುಳ್ಳವನು. ತಿನ್ನಬೇಕು. ನೋಡ
ಬೇಕು. ಕೇಳಬೇಕು. ಮಾಡಬೇಕು. ಅನುಭವಿಸಬೇಕು ಅಥವಾ
ಅಪಾಯದಿಂದ ಪಾರಾಗಬೇಕು. ಇವೆಲ್ಲಾ ಬುಭುಕ್ಷೆಯೇ. ಇಂತಹ ಇಚ್ಛೆ
ಯುಳ್ಳಾತನಿಗೇ ಅಪರವಿದ್ಯೆಯು. ಇಂತಿಂತಹ ಸಾಧನೆ ಉಪಕರಣಗಳಿಂದ
ಇಂತಹ ಅಧಿಕಾರಸಂಪನ್ನನುಳ್ಳವನು ಇಂತಹ ಸಾಧ್ಯವನ್ನು ಸಾಧಿಸಿಕೊಳ್ಳ
ಬಹುದೆಂದು ಬೋಧಿಸುವುದು. ಪ್ರತ್ಯಕ್ಷದಲ್ಲಾಗಲೀ ಅನುಮಾನ
ಪ್ರಮಾಣದಿಂದಲಾಗಲೀ ಕಾಲಾಂತರ ಲೋಕಾಂತರಗಳಿಗೆ ಸಂಬಂಧಿಸಿದ ಈ ಸಾಧ್ಯ ಸಾಧನಗಳ ಪರಿಜ್ಞಾನವಾಗಲು
ಶಕ್ಯವಿರುವುದಿಲ್ಲ. ಆದ್ದರಿಂದಲೇ ಅವೆಲ್ಲಾ ಅಜ್ಞಾತಗಳು. ಇಂತಹ
ಅಜ್ಞಾತಾರ್ಥಜ್ಞಾಪಕವಾದ್ದರಿಂದಲೇ ವೇದವು ಶಾಸ್ತ್ರವೆನಿಸಿದೆ.
ಬುಭುಕ್ಷುವು ಇಂತಹ ಶಾಸ್ತ್ರವು ತಿಳಿಸುವ ಮಾರ್ಗವನ್ನನುಸರಿಸಿ ಇಷ್ಟಾರ್ಥ
ವನ್ನು ನೆರವೇರಿಸಿಕೊಳ್ಳಬಹುದು - ಕುರ್ವನ್ನೇವೇಹ ಕರ್ಮಾಣಿ ಜಿ-
ಜೀವಿಷೇಚ್ಛತಂ ಸಮಾಃ ಈ ವಾಕ್ಯವು ಅದನ್ನೇ ಹೇಳುವುದು. ಇದೇ
ಲೋಕೈಷಣೆಯು. ತನ್ನ ಲೋಕಯಾತ್ರೆಯು ಸುಖಮಯವಾಗಿರಬೇ
ಕೆಂಬ ಇಚ್ಛೆ. ಮನುಷ್ಯನು ತನ್ನ ಅಪೇಕ್ಷೆಗೆ ಅನುಗುಣವಾಗಿ ಜ್ಞಾನ
ಕರ್ಮಗಳನ್ನು ಸಂಗ್ರಹಿಸಿಕೊಂಡು ತನಗಿಂತ ಪೃಥಕ್ಕಾದ ಸಾಧನಸಂ
ಪತ್ತಿನಿಂದ ಕರ್ಮಕಲಾಪಮಧ್ಯವರ್ತಿಮೂಲಕ ದೇಶಾಂತರ ಕಾಲಾಂತರ
ವರ್ತಿಯಾದ ಇಷ್ಟಾರ್ಥವನ್ನು ಸಾಧಿಸಿಕೊಳ್ಳುವನು ಅಥವಾ ಅನಿಷ್ಟವನ್ನು
ನಿವೃತ್ತಿ ಮಾಡಿಕೊಳ್ಳುವನು. ಇದು ಲೋಕಗತಿ. ಇದು ಸಂಸಾರ.

ಮುಮುಕ್ಷು ಎಂದರೆ ತನಗೆ ಸಂಸಾರಬಂಧನದಿಂದ ಬಿಡುಗಡೆಯಾಗ
ಬೇಕೆಂದು ಹಂಬಲಿಸುವವನು. ಇಂತಹವನಿಗೆ ಗುರೂಪದೇಶ
ವಾಕ್ಯರೂಪವಾದ ಉಪನಿಷತ್ತು-ವೇದವು ಮಾರ್ಗದರ್ಶಿಯು.
ಮನುಷ್ಯನಿಗೆ ನಾನು ಎಂಬ ಸಾಮಾನ್ಯಜ್ಞಾನವಿರುವುದೇ ಹೊರತು ತನ್ನ
ಯಥಾರ್ಥವಾದ ಸ್ವರೂಪಜ್ಞಾನವಿರುವುದಿಲ್ಲ. ಮುಮುಕ್ಷುವಿಗೆ ನಿರುಪಾ
ಧಿಕವಾದ ಸಚ್ಚಿದಾನಂದಸ್ವರೂಪದ ಅದ್ವೈತ ಬ್ರಹ್ಮಾತ್ಮವೇ ತನ್ನ ಪರ
ಮಾರ್ಥಸ್ವರೂಪವೆಂದು ದರ್ಶನಮಾಡಿಸುವುದರಿಂದ ಅಜ್ಞಾತಾರ್ಥ
ಜ್ಞಾಪಕರೂಪ ಶಾಸ್ತ್ರವು ಉಪನಿಷತ್ತು. ಇಲ್ಲಿ ಸಾಧನಾಂತರಗಳಿ
ವಿಲ್ಲ. ಶಮದಮಾದಿಗಳು ಸಾಧನವೆಂದು ಹೇಳಿದರೂ ಅವೇನು
ತನ್ನಸ್ವರೂಪಕ್ಕಿಂತ ಪೃಥಕ್ಕಾಗಿ ಸ್ಥಿತಿಯಿರುವ ವಸ್ತ್ವಂತರಗಳಾಗಿರುವ
ಲ್ಲ. ಜ್ಞಾನಸ್ವರೂಪವಾದ ತನ್ನ ಜ್ಞಾನವೇ ಇಲ್ಲಿ ಉಪಾಯವಾಗಿರುವುದು
ಆದ್ದರಿಂದ ಮೋಕ್ಷವು ಸಾಧನಸಾಧ್ಯವಾದದ್ದಲ್ಲ. ಇನ್ನು ಫಲರೂಪವ
ಮೋಕ್ಷವು ಕಾಲಾಂತರದಲ್ಲಿ ದೇಶಾಂತರದಲ್ಲಿ ಪಡೆಯುವಂತಹ ಫಲವ
ಅನಾದಿಕಾಲದಿಂದ ಗಂಟುಬಿದ್ದಿರುವ ಅಜ್ಞಾನ-ಸ್ವರೂಪಾಪರಿಜ್ಞಾನವಿಲ್ಲದ್ದು
ತನ್ಮೂಲಕವಾಗಿ ದುಃಖಕಾರಣವಾದ ಜನ್ಮರೋಗ ಹಸಿವು ಮುಪ್ಪು ಮರಣ
ಮೊದಲಾದ್ದಕ್ಕೆ ಬಲಿಬಿದ್ದು ಭಯಗ್ರಸ್ತನಾಗಿರುವ ಸ್ಥಿತಿಯಿಂದ ಮೇಲಾ
ಸಚ್ಚಿದಾನಂದಸ್ವರೂಪವಾದ ತನ್ನ ಪರಮಾರ್ಥಸ್ವರೂಪದಲ್ಲಿ ನಿಲುಗಡೆ
ಯಾಗುವುದು. ಅತ್ರ ಬ್ರಹ್ಮ ಸಮಶ್ನುತೇ. ಆದ್ದರಿಂದ ಮೋಕ್ಷವು ಆ
ವಿಷಯವಲ್ಲ. ಅನಿತ್ಯವಾದ ವಸ್ತುವಿಷಯದಲ್ಲಿ ಅದನ್ನು ಪಡೆಯಬೇಕೆ
ಆಸಕ್ತಿಯು ಇಚ್ಛೆ: ಮೋಕ್ಷವೇ ಎಂದರೆ ಆತ್ಮವೇ. ಆತ್ಮವು ನಿತ್ಯಪ್ರಾಪ್ತ

ಆತ್ಮನನ್ನು ಹೊಸದಾಗಿ ಪಡೆಯಬೇಕಾಗಿಲ್ಲ. ಆದ್ದರಿಂದ ಮೋಕ್ಷವು ಪ್ರಾಪ್ಯವಲ್ಲ.
ಇಲ್ಲಿ ಪರೀಕ್ಷೆ-ಇಚ್ಛೆ ಎಂಬುದು ಹೊಂದುವುದಲ್ಲ. ಅವಿದ್ಯಾ ಮೊದಲಾದ ಉಪಾಧಿ
ಗಳಿಗೆ ಸಿಕ್ಕಿಕೊಂಡಿರುವ ನಾನು ಅಥವಾ ಅಂತಃಕರಣಾದಿ ಉಪಾಧಿಗಳನ್ನು ಗಂಟುಹಾ
ಕಿಕೊಂಡಿರುವ ನಾನು ಆ ಎಲ್ಲಾ ಸಿಕ್ಕುಗಳನ್ನು ಗಂಟುಗಳನ್ನು ಕಳಚಿಕೊಂಡು
ನಿರುಪಾಧಿಕನಾಗಿ ಸಚ್ಚಿದಾನಂದಾದ್ವೈತ ಬ್ರಹ್ಮನಾಗುವುದೇ ಮೋಕ್ಷವು.

ಈ ರೀತಿ ಎರಡು ಮಾರ್ಗಗಳು ಶಾಸ್ತ್ರೋಕ್ತವಾಗಿವೆ.

ಸದಾಕಾಲವೂ ಅಂದರೆ ಜಾಗ್ರತ್ ಸ್ವಪ್ನ ಸುಷುಪ್ತಿಗಳಲ್ಲೂ ನಾನು ಎಂಬ
ಅನುಭವವು ನಿರಂತರವಾಗಿರುವುದರಿಂದ ಜ್ಞಾನಸ್ವರೂಪದ ನಾನು ಆತ್ಮನು
ಅಂದರೆ ಸತ್ಯ=ಪರಮಾರ್ಥಸ್ವರೂಪದವನು ಎಂದು ನಿಶ್ಚಯಿಸಬೇಕು.
ನನ್ನ ಸ್ವರೂಪವನ್ನು ಸರಿಯಾಗಿ ವಿಚಾರಮಾಡಿ ನಿಶ್ಚಯಜ್ಞಾನಮಾಡಿಕೊಳ್ಳಬೇ
ಕಾದರೆ ನನ್ನ ಒಂದೊಂದು ಅವಸ್ಥೆಯನ್ನು ಮಾತ್ರ ತೆಗೆದುಕೊಂಡರೆ ಸಾಲದು
ಒಂದೊಂದನ್ನು ಪ್ರತ್ಯೇಕವಾಗಿ ಪರೀಕ್ಷಿಸಿ ಮೇಲೆ ಒಟ್ಟಾಗಿಯೂ ಪರೀಕ್ಷಿಸಬೇಕು.

— ಜಾಗ್ರತ್ತಿನಲ್ಲಿ ನಾನು ಇಂದ್ರಿಯಗಳ ಮೂಲಕ ವಿಷಯಗಳನ್ನು
ಗ್ರಹಿಸಿ ಸುಖವನ್ನೂ ದುಃಖವನ್ನೂ ಅನುಭವಿಸುವೆನು. ನನಗೊಂದು
ಹೆಸರು ವಯಸ್ಸು ರೂಪವೂ ಇರುತ್ತೆ. ಅಷ್ಟು ಇಷ್ಟು ವಿದ್ಯೆಯೂ ಧನಸಂಪತ್ತು ಇರುವುದು.
ವರ್ಣ ಆಶ್ರಮ ಧರ್ಮಗಳು ಇರುತ್ತೆ. ಪರಿಮಾಣವುಳ್ಳ ದೇಹವಿರುವುದು
ಪತ್ನೀಪುತ್ರಾದಿಗಳಿರುವರು. ಇಷ್ಟು ಜ್ಞಾನ ಅನುಭವ ಪರಿಶೀಲನೆಯಿಂ
ದ ನನ್ನ ವಿಚಾರವಿಷ್ಟು ಕಿಂಚಿಜ್ಞನವಾಗುವುದು — ಜಾತಿ ಕುಲ
ವಯೋವಸ್ಥಾ ಸಂಸ್ಕಾರ ನಾಮರೂಪಾದಿಗಳುಳ್ಳವನು ನಾನು. ಪರಿಚ್ಛಿನ್ನ
ಪುರುಷಾಂತರದಿಂದ - ಚೇತನಾಂತರದಿಂದ ಭಿನ್ನನು ನಾನು=ಪ್ರತ್ಯನು.

ಅನುಭವಗ್ರಾಹ್ಯವು.

ಸ್ವಪ್ನಾವಸ್ಥೆಯಲ್ಲಿಯೂ ಇಂತಹದೇ ಅಂದರೆ (ತತ್ಕಾಲದೃಷ್ಟಿಯ) ಸತ್ಯಸ್ಥಿತಿ ಜಾತಿಕುಲನಾಮರೂಪಾದಿಗಳುಳ್ಳವನು ದೇಹಿಯು ನಾನು ಪರಿಚ್ಛಿನ್ನನು ಎಂದೇ ಅನುಭವವಿರುತ್ತದೆ. ಈಗ ಈ ಎರಡೂ ಅವಸ್ಥೆಗಳನ್ನು ವಿಚಾರಿಸಿ ತಿಳಿಯಬೇಕು - ಜಾಗ್ರದ್ದೃಷ್ಟಿಯ ಸ್ವಪ್ನವು ಅಸತ್ಯವೆಂದು ಹೇಳುತ್ತೇವೆ ಯದ್ಯಪಿ ಸ್ವಪ್ನದಲ್ಲಿಕಂಡ ಅನುಭವಗಳು ನೆನಪಿನಲ್ಲಿರುತ್ತವೆ. ಆದರೂ ಕನಸು ಕನಸಿನ ಸಕಲವಸ್ತುಗಳೂ ಹುಸಿ ಯಥಾರ್ಥವಲ್ಲ ಎಂದು ನಿಶ್ಚಯಿಸುತ್ತೇವೆ. ಇನ್ನು ಸ್ವಪ್ನ ದೃಷ್ಟಿಯ ಜಾಗ್ರತ್ತು ಪ್ರತ್ಯೇಕವಾದ ಸ್ಥಿತಿಯನ್ನು ಹೊಂದಿರುವುದಿಲ್ಲ. ಕನಸನ್ನು ಕಾಣುತ್ತಿರುವಾತನಿಗೆ ನಾನು ಹುಸಿ ಕನಸನ್ನು ಕಾಣುತ್ತಿದ್ದೇನೆ. ಈ ಮೊದಲು ನಾನೇ ಎಚ್ಚರದಲ್ಲಿ ಸತ್ಯವಾದ ವಸ್ತುಗಳನ್ನು ಅನುಭವಿಸುತ್ತಿದ್ದೆ. ಮತ್ತೆ ಮುಂದೆ ಅಂತಹ ಸತ್ಯವಾದ ಅನುಭವಗಳನ್ನೇ ಪಡೆಯುವೆನು ಎಂಬೀರೀತಿಯ ವಿವೇಕದ ಜ್ಞಾನವಿರುತ್ತದೆಯೇ? ಇಲ್ಲ. ಮತ್ತೇನೆಂದರೆ ತತ್ಕಾಲದಲ್ಲಿ ಅನುಭವಿಸುವುದೇ ಸತ್ಯ. ಅದಕ್ಕಿಂತ ಸತ್ಯವಾದುದು ಬೇರೆಯಿರಬಹುದೆಂಬ ಕಲ್ಪನೆಯೇ ಇರುವುದಿಲ್ಲ. ಈ ದೃಷ್ಟಿಯಿಂದ ನೋಡಿದರೆ ಜಾಗ್ರತ್ತಿಗಿಂತಲೂ ಕನಸೇ ಹೆಚ್ಚು ಸತ್ಯವೆಂದು ತೀರ್ಮಾನಿಸಬಹುದಲ್ಲವೇ? ಆದರೆ ಪ್ರಮಾಣಮೂಲಕವಾಗಿ ಪರೀಕ್ಷಿಸಿದರೆ ಮಾತ್ರ ಹೆಚ್ಚು ಸತ್ಯ ಯಾವುದೆಂದು ತಿಳಿಯುವುದು. ಪ್ರತ್ಯಕ್ಷಪ್ರಮಾಣದ ಸಾಧನಗಳು ಇಂದ್ರಿಯಗಳು. ಅವು ಯಾವ ಅವಸ್ಥೆಯಲ್ಲಿ ಹೆಚ್ಚು ಗ್ರಹಣಪಟುವಾಗಿತ್ತು? ಜಾಗ್ರತ್ತಿನಲ್ಲಿ ತಾನೆ? ಸ್ವಪ್ನದಲ್ಲೇ ಮೂರ್ಛಿತವಾಗಿದ್ದುವು (ಇರಲೇ ಇಲ್ಲ) ಅಂದಮೇಲೆ ಗ್ರಹಣಪಟುಗಳಾದ ಇಂದ್ರಿಯಗಳೇ ಇಲ್ಲದಬಳಿಕ ಅಲ್ಲಿನ ಅನುಭವಗಳು ರೂಪಾದಿ ವಿಷಯದಲ್ಲೂ ಸತ್ಯತೆಯ ವಿಷಯದಲ್ಲೂ ಪ್ರಾಮಾಣಿಕವೆಂದು ಹೇಗೆ ಹೇಳುವುದ

ಇಂದ್ರಿಯ ಪರೀಕ್ಷೆ:- ಬಲಾಬಲ ತರ್ಕಾಲೋಚನೆಯಿಂದ

ಈ ರೀತಿ ಪ್ರತ್ಯಕ್ಷಕ್ಕೆ ಪ್ರಬಲವಿರೋಧವಾಗಿ ಬಾಧಿತವಾಗಿರುವುದರಿಂದ ಕನಸಿನ ವಸ್ತುವು ಸತ್ಯತೆಯು ಹುಸಿ ಎಂದು ನಿಶ್ಚಯಿಸುತ್ತೇವೆ.

ಇನ್ನು ಸುಷುಪ್ತಿಯ ಅನುಭವವೇನು ಪರಿಶೀಲಿಸೋಣ. ಮಲಗಿದ್ದಾಗ ಸುಖವಾಗಿರುತ್ತೇನೆ. ಯಾವ ವಿಷಯಜ್ಞಾನವೂ ಇರುವುದಿಲ್ಲ. ದೈಹಿಕ ಐಂದ್ರಿಯಿಕ ಮಾನಸಿಕ ಪರಿತಾಪಗಳ ಅನುಭವವೂ ಕೂಡ ಇರುವುದಿಲ್ಲ. ಇದು ಸತ್ಯ ಅಥವಾ ಮಿಥ್ಯಾ ಎಂಬ ಜ್ಞಾನವೂ ಇಲ್ಲಾ. ತನ್ನ ಮೇಲೂ ಜ್ಞಾನವಿಲ್ಲಾ. ನಾನೆಂಬ ವಸ್ತುವು ಇದ್ದದಕ್ಕೆ (ಲೌಕಿಕ ಸಾಕ್ಷಿ). ಇನ್ನು ಅನುಭವ ಅಥವಾ ಜ್ಞಾನವು ಆ ಸಮಯದಲ್ಲಿ ಇದ್ದಿತೇ ವಿಚಾರಿಸಬೇಕು. ನಿದ್ರೆಯಿಂದ ಎಚ್ಚರವಾದ ಬಳಿಕ ಸುಖವಾಗಿ ಮಲಗಿದ್ದೆ ಏನನ್ನೂ ಅರಿಯಲಿಲ್ಲ, ಎಂಬ ಸ್ಮೃತಿ ಅಥವಾ ಅನುಸಂಧಾನವುಂಟಾಗುವುದು. ಅನುಭವವಾಗುವುದರಿಂದ ತತ್ಸಾಕ್ಷಿತ್ವೇನ ಸುಷುಪ್ತಿಕಾಲದಲ್ಲಿ ಕೇವಲ ನಿರ್ವಿಶೇಷಜ್ಞಾನ ಅನುಭವವಿದ್ದಿತೆಂದು ನಿಶ್ಚಯವಾಗುವುದು. ವಿಶೇಷಜ್ಞಾನವಿದ್ದಿಲ್ಲ ಅಷ್ಟುಮಾತ್ರದಿಂದ ಜ್ಞಾನವೇ ಇರಲಿಲ್ಲವೆಂದು ಹೇಳುವ ಹಾಗಿಲ್ಲ. ಜ್ಞಾನವೇ ಇದ್ದಿತು. ಈಗ ಮತ್ತೆರಡು ಅವಸ್ಥೆಗಳೊಡನೆ ವಿಚಾರಮಾಡುವಾ. ಈ ಸುಷುಪ್ತಿಯ ಅನುಭವದಲ್ಲಿ ಅವಸ್ಥಾಂತರವಾಗಲೀ ತನಗಿಂತ ಮತ್ತೆ ವಿಷಯ ವಸ್ತ್ವಂತರವಾಗಲೀ ಇಲ್ಲವೇ ಇಲ್ಲ. ತನ್ನಲ್ಲಿಯೂ ಭೇದವಿಲ್ಲ. ನಾನು ಪ್ರಾಣ ಪ್ರಾಣಿ ಎಂಬ ಜ್ಞಾನವಿಲ್ಲ ಕಲ್ಪನೆಯೂ ಇಲ್ಲ. ದೇಶಕಾಲಗಳು ಇರುವುದಿಲ್ಲ. ದುಃಖಗಳಿಲ್ಲವು ಭಯವು ತೊಲಗಿರುವುದು. ಮನಸ್ಸಾದಿ ಕರಣಗಳು ಇರುವುದಿಲ್ಲ. ಇನ್ನು ಎಚ್ಚರವಾಗುತ್ತಿದ್ದ ಹಾಗೆ ಪ್ರಾಣ ಮನಸ್ಸಾದಿಗಳು ಎದ್ದುಕೊಳ್ಳುತ್ತವೆ. ಬಡನಯೇ ಹಸಿವು ಮೊದಲಾದ ಭಯ ದುಃಖಾದಿಗಳು ಬೆನ್ನುಹತ್ತುತ್ತವೆ. ಇದರಿಂದ ಪ್ರಾಣಮನಸ್ಸಾದಿಗಳಿಗೆ ಸಕಲಭಯಗಳು ವಿಷಯ

ಮಾಯೆ = ತೋರುವುದು ಮರೆಯಾಗುವುದು ಮತ್ತೆ ಮತ್ತೆ ತೋರುವುದು ಮತ್ತೆ ಮರೆ

ಮೂರು ಅವಸ್ಥೆಗಳಲ್ಲೂ ಐಕ್ಯವಾಗಿ ಮೂಲವಾಗಿ ಆಧಾರವಾಗಿ ಅವಿಚ್ಛಿನ್ನವಾಗಿ
ಇರುವ ನಿರ್ವಿಶೇಷಜ್ಞಾನಸ್ವರೂಪದ ನಾನು ಎಂಬ ವಸ್ತುವಿಗೆ ಭಯವು
ವಿಷಯವಾಗದಲ್ಲ. ದೇಶಕಾಲದನ್ನವೇ (ಸಂಬಂಧಗಳ) ಶಬ್ದ ಇದು ಸಿಕ್ಕುತ್ತಿಲ್ಲ. ಪ್ರಾಣ
ಇದೇ ಮೂಲ ಎಂಬಷ್ಟು ಸಿದ್ಧವಾಗುವುದು. ಸ್ವಪ್ನಜಾಗ್ರದ್ದಶೆಗಳ
ಸುಷುಪ್ತಿಯು ಅಜ್ಞಾನಸ್ಥಿತಿಯು. ಸುಷುಪ್ತಿದಶೆಯು ಜಾಗ್ರತ್ಸ್ವಪ್ನಗಳ
ಶೂನ್ಯ. ಇಲ್ಲವೇ ಇಲ್ಲ = ಅನಾತ್ಮ. ಯದ್ಯಪಿ ಸುಷುಪ್ತಿಯು ಅಜ್ಞಾನ
ವಿಶೇ. ತಮೋಮಯವೇ. ಅಂದರೆ ವಿಷಯಜ್ಞಾನಕ್ಕೆ ಅಗ ಶಕ್ಯವಿಲ್ಲ.
ಎಂದು ಒಂದು ರೀತಿ ವಿಚೇಚಿಸಿದಂತೆ ಮತ್ತು ವಿಚಾರ ಮಾಡಿದರೆ ತಿಳಿಯುವದೇ
ನೆಂದರೆ – ತನಗಿಂತ ಬೇರೆ ವಸ್ತು ಇದ್ದರೆ ತಾನೇ ತಿಳಿಯುವದು? ತನ್ನನ್ನೆ
ವರಕ್ಕೆ ತಿಳಿಯಬಲ್ಲನೆಂದರೆ ತಾನೇ (ಸಕಲವನ್ನು) ತಿಳಿಯತಕ್ಕವನಾಗಿರಬೇಕಾದರೆ
ತನ್ನನ್ನು ಹೇಗೆ ವರದಿಂದ ತಿಳಿಯಬಹುದು? ಸಾಧನವಿಲ್ಲ. ತಿಳಿಯುವಾ
ಶ್ಯಕತೆಯು ಇಲ್ಲ. ಆತ್ಮನು ಸ್ವಯಂ ಆಪ್ತಕಾಮನು. ಆತ್ಮಾರಾಮನು ಆಗಿರು
ಆಕಾಂಕ್ಷೆಯೇ ಇರುವುದಿಲ್ಲ.

ಇನ್ನು ಜಾಗ್ರತ್ಕಾಲದಲ್ಲಿ ಅಷ್ಟು ತಮೋವ್ಯಾಪ್ತಿಯಿರುವುದಿಲ್ಲ. ಅಂದ
ಮಾತ್ರಕ್ಕೆ ಆತ್ಮಸ್ವರೂಪಜ್ಞಾನವುಂಟಾಗಲು ಸಾಧ್ಯವೇ? ವರಕ್ಕೆ ಆತ್ಮ
ಜ್ಞಾನವಾಗುವುದಿಲ್ಲ? ಯಾವುದರಿಂದಲೇ ಆತ್ಮಜ್ಞಾನವಾಗಲಿ ಎಂದರೆ –
ಮೊದಲನೆಯದಾಗಿ ಸಕಲವನ್ನು ಅರಿಯುವಾತನು ಆತ್ಮನು
ತಾನೇ ಆಗಿರುವುದರಿಂದ ಆತ್ಮಕ್ಕೆ ಅಂದರೆ ಯಾವ ಮನುಷ್ಯನಿಗೂ
ತನ್ನನ್ನು ತಿಳಿಯುವ ಆವಶ್ಯಕತೆಯೇ ಇರುವುದಿಲ್ಲ. ಆತ್ಮವು = ತಾನು
ಇದ್ದುಬಿಟ್ಟದ್ದನೆ – ಸ್ವತಸ್ಸಿದ್ಧ. ತನ್ನನ್ನು ಸಾಧಿಸಿಕೊಳ್ಳಬೇಕಾದ್ದಿಲ್ಲ.

[illegible]

ಸ್ವಸ್ವರೂಪದ ಯಥಾರ್ಥ ಜ್ಞಾನಕ್ಕೆ ಸಾಕ್ಷ್ಯ. ಶರೀರ ಪರೀಕ್ಷಣ [illegible]

ನಿನ್ನ ಕಾರಣಕ್ಕೆಲ್ಲ ಬೇಕಾದುದು ಕ್ರಿಯೆಗಳ ಬೇರೆ ಕರದಲ್ಲ ಸಾಧ್ಯವೆ. ನಾವು ದಾಸ ನಿನ್ನವರು [illegible] ಪ್ರತ್ಯಕ್ಷ ಸ್ವಭಾವವಾಗಿದೆ. ಆದ್ದರಿಂದ ಪ್ರತ್ಯಕ್ಷವಾಗಿ ಕಾಣುವ [illegible] ಆತ್ಮ [illegible] ನಿನ್ನ [illegible] ಆತ್ಮನೇ ತನ್ನ ಯಥಾರ್ಥ ಸ್ವರೂಪದ ಅರಿವು ಕಳೆದುಕೊಂಡಿರುವನು? ಆ ತಿಳಿವು ಕಲ್ಪನೆಯು ಸ್ವಾಭಾವಿಕ ಎಂದರೆ ಅವಿಕಾರ ಸಿದ್ಧವಾದುದು. ಆದ್ದರಿಂದಲೇ ಮನಸ್ಸು ಆತ್ಮ ಸ್ವರೂಪ ಜ್ಞಾನವು ಇಂದ್ರಿಯಗಳಿಂದ ಸಿದ್ಧವಾಗುವುದಿಲ್ಲ.

ಇಂದ್ರಿಯಗಳೆಲ್ಲವೂ ಬಹಿರ್ಮುಖವಾಗಿರುವುದರಿಂದ, ಅಂದರೆ ತನ್ನ ಹೊರಗೆ ಎಂದರೆ ಮೂಲಾಧಾರವಾದ ಆತ್ಮನನ್ನು ಅವು ನೋಡಲಾರವು [illegible] ಚೇತನನಾದ ಆತ್ಮನೇ ತಾನೆ. ಮನ ಬುದ್ಧಿಗಳು ಅಚೇತನವಾದ್ದರಿಂದ ಅವಕ್ಕೆ ಜ್ಞಾನವುಂಟಾಗುವುದಿಲ್ಲ. ಆತ್ಮನಿಗೆ ಜ್ಞಾನವುಂಟಾಗಲು ಎಂದರೆ ಅವನು ತಾನೇ ಬೇರೆ ಇರುವುದು? ತನಗೆ ತಾನು ಸ್ವಯಂಸಿದ್ಧ. ಅವನಿಗೆ ಹುಟ್ಟಿಯಿಲ್ಲ. ಸಾವಿಯಿಲ್ಲ. ಮತ್ತು ಕೇವಲ ಜ್ಞಾನಸ್ವರೂಪನೇ ಆಗಿದ್ದಾನೆ. ನಿನ್ನ ಹೊಸದಾಗಿ ಜ್ಞಾನವುಂಟಾಗಬೇಕಾಗಿಲ್ಲ. ಆದ್ದರಿಂದ ಆತ್ಮನಿಗೆ ಆತ್ಮ ಜ್ಞಾನವುಂಟಾಗಲು ಎನ್ನುವುದು ಆತ್ಮನ ಸ್ವರೂಪ ಜ್ಞಾನವನ್ನು ಎಂಬ [illegible]

ನಿನ್ನ ಆತ್ಮ ಜ್ಞಾನವಾಗಬೇಕಾದುದು ಮನುಷ್ಯನಿಗೆ ಎಂದರೆ ಪ್ರಧಾನವಾದ ಮನಸ್ಸಿಗೆ. ಎಲ್ಲ ಮನಸ್ಸು ಅಚೇತನವೆಂದು ಹೇಳಿದ್ದೇವಲ್ಲ ಎಂದರೆ ಮನಸ್ಸು [illegible] ಅಚೇತನವೇ. [illegible]

* ವ್ಯಾಪಿಯಾದ ಪರಬ್ರಹ್ಮನಿಗೆ ಪರಂಧಾಮವು ಚೈತನ್ಯವೆನ್ನುವರು. ಹಾಗೆಯೇ ಸಚ್ಚಿದಾ
ಆತ್ಮಸ್ವರೂಪನಿಗೆ ಮನಸ್ಸೇ ಪರಂಧಾಮ = ಮನಸ್ಸೇ ಚೈತನ್ಯವು.

ಮನಸ್ಸು ಆತ್ಮನಿಗೆ ಅಂತರತರವಾಗಿದೆ. ಶ್ರೇಷ್ಠವಾಗಿದೆ. ವ್ಯಾಪಿಯಾದ ಆತ್ಮನ
ಮನಸ್ಸಿನಲ್ಲಿ ಸೇರಿ ಮನಸ್ಸೇ ಆಗಿದ್ದಾನೆ. ಇದರಿಂದ ಚೈತನ್ಯ ಮತ್ತು ಮನಸ್ಸು
ಎರಡೂ ತತ್ತ್ವ ಒಂದರ ಭಿನ್ನಭಾಸವು ಸಿದ್ಧವಾಗುವುದರಿಂದ
ಅಂತಹ ಮನಸ್ಸು ಬೆಳಗುತ್ತಿರುತ್ತದೆ. ಮರೆಯುತ್ತದೆ. ನೆನೆಯುತ್ತದೆ. ನಾನಾ
ವಿಧವಾಗಿ ಕಲ್ಪಿಸುತ್ತದೆ. ಕಾಮಿಸುತ್ತದೆ. ಕರ್ಮ ಮಾಡುತ್ತದೆ. ಫಲವನ್ನು
ಭೋಗಿಸುತ್ತದೆ. ಬದ್ಧವಾಗಿದೆ. ಮುಕ್ತವಾಗಬಲ್ಲದು.

ಮನಸ್ಸು ದೊಡ್ಡ ಮಹಿಮೆಯುಳ್ಳದ್ದಾಗಿರುತ್ತದೆ.

ನಿರುಪಾಧಿಕವಾದ ಆತ್ಮಚೈತನ್ಯವು ಸರ್ವಸಮವ್ಯಾಪ್ತವಾಗಿರುವುದು. ನಿರ್ಗು
ಸ್ವರೂಪದ ಆ ಚೈತನ್ಯವು (ಚೈತನ್ಯದ ಭಾಗ ಭಾಸವಾಗದ) ಮನಸ್ಸಿನಲ್ಲಿ ಭಾಸವಾಗುವುದು.*

ಮನಸ್ಸು ಅನ್ನದ ಸೂಕ್ಷ್ಮ ಭಾಗದ ಶ್ರೇಷ್ಠವಾದ ಅಂಶವು. ಅದೇ ಪ್ರಧಾನ
ಮನಸ್ಸಿನಲ್ಲಿ ಜ್ಞಾನಪ್ರವೃತ್ತಿಗಳು ಆವಿರ್ಭವಿಸುವುವು. ಅದೇ
ಸಕಲ ವ್ಯವಹಾರಗಳಿಗೂ ಮೂಲವು. ಅದರ ಕ್ರಿಯೆಯು ಅಗಾಧ.
ಮನಸ್ಸು - ಚಿತ್ತ - ಚಿದಾಭಾಸ. ಸ್ವಪ್ನದಲ್ಲಿ ಸ್ವಯಂ ಸೃಷ್ಟಿ
ಪ್ರಪಂಚವನ್ನು ಇದು ಆಶ್ರಯಿಸಿಕೊಂಡಿರುವಂತೆ ಕಂತೆಗಳು ಸೃಷ್ಟಿ -
ಆತನ ಸೃಷ್ಟಿಗಳು ಕಂಡುಬರುತ್ತವೆ. ಪ್ರಜಾಪತಿ - ಪುನರ್ಜನ್ಮ
ಕಾಲ ಮತ್ತು ದೇವತಾತತ್ತ್ವಶಕ್ತಿಯನ್ನು ಮೂರ್ತೀಕರಿಸುವ
ಚಂದ್ರ - ವಾಯು ದೇವತಾ - ಅಧಿದೈವತ = ಇಂದ್ರಿಯಸ್ವರೂಪಿ
ಸೇರಿಕೊಂಡಿರುವುದು. ಧರ್ಮಾಧಿಕಾರಿ. ಹಾಗೆ ಸಕಲ ಸೃಷ್ಟಿ
ಭವ ಮನಸ್ಸಿನಲ್ಲೇ ಅವಲಂಬಿಸಿಕೊಂಡಿದೆ. ಮನಸ್ಸಿನ ದೆ
ಹಿಂದಿನ ಜನ್ಮದ ಜನ್ಮ — ಮುಂದಿನ ಗತಿಯೂ ಇದರಿಂದ.
ಅಂತಹದು ಮನಸ್ಸಿನ ಮಹಿಮೆ. ಇಷ್ಟೇ ಇಲ್ಲ. ಇನ್ನೂ

ಸಂವಿತ್, ಸ್ವಯಂ ಪ್ರಕಾಶ. ಮೋಕ್ಷೈಕ ಸಾ ಅಶುದ್ಧ್ಯಾತ್.
ಯನ್ಮತಂ ತನ್ಮಯಂ ಯಥಾ ತಥಾ [illegible] ವ್ಯತಿರೇಕಃ ।

ನಾನು ಕರ್ತ ಭೋಕ್ತೃ ಎನ್ನುವ ಎಂಬ ಅಹಂಕಾರ ವ್ಯವಹಾರ ಪ್ರಪಂಚ ನಾನು ಎಂಬ ಅಭ್ಯಾಸ [illegible] ಇದಕ್ಕೆ ಮನಸ್ಸೇ ಆಧಾರವು. ಶಾಂತಿಗೆ ನನ್ನನ್ನು ದೇಹೇಂದ್ರಿಯಾದಿಗಳಿಂದ ಬಿಡುಗಡೆ ಮಾಡುವುದು - [illegible] - ಮನಸ್ಸೇ. ಆದರೆ ವಿಚಾರ [illegible] ಪ್ರಮಾಣ ಪ್ರಮೇಯ [illegible] ಗಳನ್ನು [illegible] ಶ್ರವಣ ಮನನ ನಿದಿಧ್ಯಾಸನ - ಇವೆಲ್ಲ ಮನಸ್ಸಿನ [illegible]. ದೇಹವನ್ನು [illegible] ನಾನಾ ಉಪಾಧಿಗಳು [illegible] ಇಂತಹ [illegible] ಗಳನ್ನು ನನಗೆ ಕಲ್ಪಿಸಿ ನನ್ನನ್ನು ಸಂಸಾರಿ, ಬದ್ಧ, ಜೀವ, ದುಃಖಿ ಎಂದು ಹೀನನಾಗಿ ಮಾಡಿದ್ದರೂ, ಇದೇ ಮನಸ್ಸೇ ಈಗ ಸದ್ಗುರುವಿನ ದಯೆಯಿಂದ ನನ್ನನ್ನು ನಡೆಸಿ ನಾನು ಅಕರ್ತ ಅಭೋಕ್ತೃ ಶುದ್ಧ ಬುದ್ಧ ಮುಕ್ತ ಬ್ರಹ್ಮಸ್ವರೂಪನು ನಾನು ಎಂಬ ಜ್ಞಾನವನ್ನು ಬಲಪಡಿಸಿ ಅಹಂ ಬ್ರಹ್ಮಾಸ್ಮಿ = ಅಪರೋಕ್ಷಾನುಭವಕ್ಕೆ ಸಹಾಯಕವಾಗಿರುವುದು - ಮನವೇ ಮೃತ್ಯು - ಮನವೇ ಗುರು — [illegible] ಮೋಕ್ಷಃ ಮನಸ್ಯೇವ [illegible] ಮನಸಾ ಕಲ್ಪಿತೋ ಬಂಧಃ ಮನಸೈವ ವಿಮುಚ್ಯತೇ ॥ ಎಂದು ಆಚಾರ್ಯರ.

ಅಂದ ಮಾತ್ರಕ್ಕೆ ಮನಸ್ಸು ಪರಮಾರ್ಥವೆಂದು ತಿಳಿಯಬಾರದು. ವಿಚಾರ [illegible] ಮನಸ್ಸಿನ ಭೂಮಿಕೆ - [illegible]. ಈ ಭೂಮಿಕೆ [illegible] ವಿಚಾರಮಾಡಿಕೊಳ್ಳಬೇಕು [illegible] ನಿರ್ವಿಶೇಷವಾದ ಆತ್ಮಸ್ವರೂಪವನ್ನು [illegible] [illegible] ಈ ಭೂಮಿಕೆ [illegible] ತೋರಿಸಿದೆ.

ಮನುಷ್ಯನಿಗೆ ತನ್ನ ಆತ್ಮಸ್ವರೂಪವನ್ನು ತಿಳಿಯದಿರುವುದು ಅಜ್ಞಾನವು
ಈ ಅಜ್ಞಾನಮಾತ್ರವೇ ಅನರ್ಥಕಾರಿಯಲ್ಲ. ಆದರೆ ದೇಹಾತ್ಮಜ್ಞಾನವೆಂಬುದು ನಿ
ವಾಗಿ ಅಂಟಿಕೊಂಡಿರುವುದೇ ದೊಡ್ಡ ಪ್ರಮಾದ - ಅನರ್ಥಕಾರಿ —ಹೇಗೆಂದರೆ-
ನಿದ್ದೆಯಲ್ಲಿ ಮನುಷ್ಯನಿಗೆ ತಾನು ಯಾರು - ತನ್ನ ಸ್ವರೂಪವೇನು ಮು
ತಾದ್ದೆಂದೂ ಗೊತ್ತಿರುವುದಿಲ್ಲ. ತಾನು ಇದ್ದೆನೆಂಬ ಜ್ಞಾನವೂ ಆಗ್ಗೆ ಇರುವುದಿಲ್ಲ
ಆದಾಗ್ಯೂ ಅವನು ಇದ್ದೇ ಇರುತ್ತಾನೆ. ಹಾಯಾಗಿ ಸುಖವಾಗಿಯೇ ಇರುತ್ತಾನೆ.
ಯಾವ ದುಃಖ ಭಯಗಳೂ ಇರುವುದಿಲ್ಲ. ತನ್ನ ಸ್ವರೂಪಕ್ಕಿಂತ ಪ್ರತ್ಯೇಕವಾಗಿ
ಮನಸ್ಸು-ದೇಹ ಮೊದಲಾದ
ಯಾವುದರ ಕಲ್ಪನೆ-ಭಾವನೆ-ಭೇದ ಅನುಭವವೂ ಇರುವುದಿಲ್ಲ. ಆಗ್ಗೆ
ಅದ್ವೈತಾತ್ಮನಾಗಿಯೇ ಇದ್ದುಬಿಟ್ಟಿದ್ದಾನಾದ್ದರಿಂದ ಆಗ್ಗೆ ಅಭಯಪ್ರತಿಷ್ಠನು.
ಹೀಗೆ ಕೇವಲವಾಗಿ ಆತ್ಮದೃಷ್ಟಿಯಿಂದ ದೇಹಾದಿಗಳು ನಿದ್ರೆಯಲ್ಲಿ ಇರಲಿಲ್ಲ.
ಹಾಗೆ ಇರದದರೂಪುಳ್ಳ ದೇಹೇಂದ್ರಿಯಸಂಘಾತವೇ ತಾನು ಎಂಬ ತಪ್ಪು ತಿಳು
ಳಿಕೆಯೂ ಇರಲಿಲ್ಲ. ಆದ್ದರಿಂದ ಸ್ಥಿತಿಯಲ್ಲಿ ಅಖಂಡಾನಂದಾನುಭವಕ್ಕೆ
ಚ್ಯುತಿಯೂ ಇಲ್ಲ.— ಹೀಗೆ ದೇಹೇಂದ್ರಿಯಗಳ-ಭೇದಭಾವನೆಗಳ ಸಂಗವನ್ನ
ಕಳಚಿಕೊಂಡು ಸುಖವಾಗಿ ಮಲಗಿದ್ದ ಮನುಷ್ಯನೇ-ಆತ್ಮನೇ ಆದ ಮನುಷ್ಯನು
ಎಚ್ಚರವಾದ ಕೂಡಲೇ ಅದೇ ನಿದ್ರೆಯ ಆತ್ಮನಾದ ತನ್ನನ್ನು ದೇಹೇಂದ್ರಿಯಸಂಘಾ
ತವೆಂದು ತಿಳಿಯುತ್ತಾನೆ. (ಇದೇ ತಪ್ಪುತಿಳುವಳಿಕೆ) ಇದು ಅಜ್ಞಾನ=ಜ್ಞಾನಕ್ಕೆ
ವಿರೋಧಿ. ನಿದ್ರೆಯ ಅಜ್ಞಾನವು - ಜ್ಞಾನವಿಲ್ಲದರೂಪವು. ಜಾಗ್ರತ್ತಿನ ಅಜ್ಞಾನ
ವು - ವಿದ್ಯೆಗೆ ಪ್ರತಿಯಾದ ಶತ್ರುವು =ಅವಿದ್ಯೆ= ವಿದ್ಯಾವಿರೋಧಿಯಾಗಿರು
ಕತ್ತಲೆಯು ಪ್ರಕಾಶಕ್ಕೆ ವಿರುದ್ಧವಾಗಿರುತ್ತದೆಯಷ್ಟೆ. ಹಾಗೆಯೇ ಜ್ಞಾನಾನಂ
ಸ್ವಭಾವಕ್ಕೆ ವಿರುದ್ಧವಾದದ್ದು ನಾನು-ನನ್ನದು ನೀನು ಅದು ಮುಂತಾದ ಅಜ್ಞಾನವ

ಅವಿದ್ಯಾದಿದೋಷನಿವೃತ್ತಿಕೃತೇ ಪ್ರತ್ಯಗ್ಧಿಯಃ ಸ್ವಪ ವಿದ್ಯಾ.

ಆದರೆ ಅಸಂಗನಾದ ಆತ್ಮನು ತನ್ನನ್ನು ದೇಹೇಂದ್ರಿಯಸಂಘಾತವೆಂದೇ ತಿಳಿಯುತ್ತಾನಾದ್ದರಿಂದ
ಒಡನೆಯೇ ರಾಗ ದ್ವೇಷ ಸುಖ ದುಃಖ ಹಸಿವು ಬಾಯಾರಿಕೆ ಜನ್ಮ ಮರಣ
ಭಯ ಮುಂತಾದ ಅನರ್ಥಪರಂಪರೆಗಳು ಗಂಟುಬೀಳುತ್ತವೆ. ಆದ್ದರಿಂದ ಈ
ತಪ್ಪುತಿಳುವಳಿಕೆಯೇ ಅವಿದ್ಯೆ, ಇದರಿಂದಲೇ ತನ್ನಲ್ಲಿ ದೇಹಾದಿಗಳನ್ನು ಕಲ್ಪಿಸಿ
ಕೊಳ್ಳುತ್ತಾನೆ ಇದೇ ಅಧ್ಯಾಸವು. ದೇಹಾದಿಗಳಿಲ್ಲದ, ಸುಷುಪ್ತಿಯಲ್ಲಿ ಪ್ರ
ಸಿದ್ಧವಾದ ತನ್ನ ನಿಜಸ್ವರೂಪವೇನೆಂಬುದನ್ನು ಇದ್ದದ್ದು ಇದ್ದಂತೆ ತಿಳಿದರೆ
ಬೆಳಕಿನ ಕಾಲದಲ್ಲಿ ಕತ್ತಲೆಯು ತೊಲಗುವಂತೆ
ತಪ್ಪುತಿಳುವಳಿಕೆಯು-ಅಜ್ಞಾನವು ಹೋಗುವುದು ಅಧ್ಯಾಸವೂ ತಪ್ಪುವುದು
ಈ ಅನುಭವವೇ ವಿದ್ಯೆ. ಇದರಿಂದ ಅನರ್ಥಕ್ಕೆ ಎಡೆಯಾಗುವುದಿಲ್ಲ.

ಎಚ್ಚರವಾದ ಕಾಲದಲ್ಲಿ ಅವಿದ್ಯೆಯಿಂದ ಅಧ್ಯಾಸವಾಗುತ್ತದೆ ಎಂದು ಹೇಳಿದ್ದ
ರಿಂದ ಅಧ್ಯಾಸವು ಒಂದು ಕಾಲದಲ್ಲಿ (ಜಾಗ್ರತ ಕಾಲವಿಶೇಷದಲ್ಲಿ) ನಡೆಯುವ
ಕಾರ್ಯವೆಂದು ತಿಳಿಯಬಾರದು. ಕಾಲವೆಂಬುದೂ ಅಧ್ಯಾಸವೇ. ಆದ್ದರಿಂದ
ಅಧ್ಯಾಸವು ಎಂದಾಯಿತು ಎಂದಿಗೆ ಮುಗಿಯುವುದು ಎಂದು ಹೇಳುವುದಕ್ಕೆ
ಆಗುವುದಿಲ್ಲ. ನಾನು ಎಂಬ ಅಧ್ಯಾಸವು ಮೊದಲಿಗೆ ಆಗುತ್ತೆ ಅನಂತರ ನನ್ನ
ಎಂಬ ಅಧ್ಯಾಸ ಬಳಿಕ ದೊಡ್ಡ ದೊಡ್ಡದಾಗಿ ಹೀಗೆ ಮೇಲಿಂದ ಮೇಲೆ ಅಧ್ಯಾಸವಾಗುವು
ದೆಂದು ತಿಳಿಯಬಾರದು. ಅಧ್ಯಾಸವು ಅನಾದ್ಯನಂತವಾದುದು. ಅಸಂಲಕ್ಷ್ಯ
ಕ್ರಮವಾಗಿರುವುದು. ಸೂರ್ಯ ಹುಟ್ಟಿದ-ಕತ್ತಲೆ ಹೋಯಿತು ಎಂಬಂತೆ. ಅಧ್ಯಾಸವಾ
ದುವುದು - ತಿಂಗರಿಸಿ ತಿಳಿಯದೇ ಇರುವುದು - ಸತ್ಯಾನೃತಗಳನ್ನು ಬೆರೆಸಿಕೊಳ್ಳು
ವುದು ಇವೆಲ್ಲಾ ಒಟ್ಟಿಗೆ ಆಗುವುದು. ಕನಸು ಬಂದಾಗ ಆ ಸ್ಥಿತಿಯ ದ್ರಷ್ಟೃ
ಕರಣಗಳು ಮತ್ತು ವಿಷಯಗಳು ಎಲ್ಲಾ ಒಟ್ಟಿಗೇ ತೋರಿದ್ದು ವಿಕಾರವಾಗುತ್ತಾ - ಎ
ಚ್ಚರವಾಗುತ್ತಲೇ ಒಟ್ಟಿಗೆ ಎಲ್ಲವೂ ಲೋಪಿಸಿಹೋಗುತ್ತವೆ. ಹಾಗೆಯೇ ಎಚ್ಚರದಲ್ಲಿ
ಕನಸಿನಲ್ಲಿ ಒಂದು ಪುರಾತನಕಾಲದ್ದೆಂದೂ ಒಂದು ಹೊಸದೆಂದೂ ನಾನಾತರದ ವಿಷಯ
ಗಳು ತೋರುವುವು. ವಸ್ತುತಃ ಆ ಕನಸೇ ತಾತ್ಕಾಲಿಕವು. ವಿಷಯಗಳು [illegible]
[illegible]

ಅಧ್ಯಾಸದೃಷ್ಟಿಯಿಂದ ಅಧ್ಯಾಸವು ಅನಾದಿಯಾಗಿದ್ದರೂ ಪರಮಾರ್ಥ
ದೃಷ್ಟಿಯಿಂದ ಆತ್ಮನ ನಿಜಸ್ವರೂಪಕ್ಕಿಂತ ಪೃಥಕ್ಕಾಗಿ ಏನೊಂದೂ ಇರಲಿಲ್ಲ
ಇಲ್ಲ - ಇರುವುದಿಲ್ಲ. ಬರೀ ತೋರಿಕೆ. ಅಧ್ಯಾಸದ ನಾಮರೂಪಗಳು ಈಗಲೂ ಇ
ಮುಂದೆಯೂ ಇರುವುದಿಲ್ಲ ಎಂದು ನಿಶ್ಚಯವಾಗುವುದು.

ಅಧ್ಯಾಸವು ಮಿಥ್ಯಾಪ್ರತ್ಯಯರೂಪವು. ಅಂದರೆ "ಇದಲ್ಲದ್ದನ್ನು - ಹಾಗಿ-
ಲ್ಲದಿರುವುದನ್ನು ಇದು - ಹಾಗಿರುವುದು" ಎಂಬ ಅರಿವು. ಆದ್ದರಿಂದಲೇ ಇದ್ದ-
ನ್ನು ಇದ್ದಹಾಗೆ ತಿಳಿದುಕೊಳ್ಳುವುದೆಂಬ ಅನುಭವದಿಂದಲೇ ಬಾಧಿತವಾಗುವ
ಜನರು ಕೇವಲ ಬಾಹ್ಯವ್ಯವಹಾರದಲ್ಲಿ ತೊಡಗಿಕೊಂಡು ತಮ್ಮ ಸ್ವಸ್ವರೂಪವ-
ವಿಚಾರದಿಂದ ತಿಳಿದುಕೊಳ್ಳದೇ ಇರುವಾಗಲೆಂತಹವರಿಗೆ ಈ ವಿಷಯ ವಿಷಯಿ ಜ್ಞಾನವೇ ಸರಿ ಎಂದು
ತೋರುತ್ತದೆ. ಅಷ್ಟೆ. ಇದೇ ಅಧ್ಯಾಸ.

ಅಧ್ಯಾಸವು ಅನರ್ಥಕಾರಿ. ಅದು ನಿಜವಾದ ಆತ್ಮನಲ್ಲಿಲ್ಲದ ಕರ್ತೃತ್ವ
ಭೋಕ್ತೃತ್ವವನ್ನುಂಟುಮಾಡುವುದು. ಏನಾದರೊಂದು ಕರ್ಮವನ್ನು ಮಾಡಿ -
ಅದರ ಫಲವನ್ನು ಅನುಭವಿಸುವುದು ವಿಚಾರಕ್ಕೊಂದುವುದು ಎಂಬುವುದು ಜನರ ನಿಜವಾದ ಸ್ವರೂ-
ಪವಲ್ಲ. ಅವರ ತಪ್ಪು ತಿಳುವಳಿಕೆಯಿಂದ ಹಾಗೆ ತೋರುತ್ತದೆ. ಧರ್ಮಾಧರ್ಮಗಳು
ಆತ್ಮನ ಗುಣಗಳಲ್ಲ. ಆತ್ಮನಲ್ಲಿ ಕರ್ತೃತ್ವ, ಭೋಕ್ತೃತ್ವಗಳು ಇರುವುದಿಲ್ಲ.
ಆತ್ಮನನ್ನು ಅಂತಃಕರಣಾದಿಗಳನ್ನು ಪರಸ್ಪರಾಧ್ಯಾಸಮಾಡುವುದೇ ಆತ್ಮನ
ಕರ್ತೃತ್ವಕ್ಕೂ ಭೋಕ್ತೃತ್ವಕ್ಕೂ ಕಾರಣ. ಎಚ್ಚರದಲ್ಲಿ ಈ ಅಧ್ಯಾಸವು
ಪ್ರತ್ಯಕ್ಷದಲ್ಲಿ ಇಲ್ಲದಿರುವುದಕ್ಕೂ ಸಾಕ್ಷಿಯೇ - ನಾನು - ಆತ್ಮನು. ಅನು-
ಭವಿ ಸಾಕ್ಷಿ. ಅದೇ ಸಹಜವಾದ ಜ್ಞಾನ. ಎಚ್ಚರದಲ್ಲಿ ಅಂತಃಕರಣಾದಿ ಇಂದ್ರಿಯ
ದೇಹಾದಿಗಳಲ್ಲಿ ಇದ್ದ - ಅಧ್ಯಾಸವಾಗಿ ದೇಹವೇ ನಾನು. ನಾನೇ ದೇಹ ಎಂದು

ಪ್ರವಚನದಿಂದ ನಾನೇ-ಚಿತ್ತನು ನಿದ್ರೆಯಲ್ಲಿ ಅಂತಃಕರಣಗಳಿಂದ ಸ್ವಪ್ನಪ್ರಾಯ
ಪ್ರಪಂಚದಲ್ಲಿ ಅನಭ್ಯಸ್ತನಾದ ನಾನು ಅರಿವಿಲ್ಲದಾಗಿ-ಚಿತ್ತನು ಸ್ವಪ್ನಸ್ಥನಾಗಿ
ವಿಷಯಗಳ ಅನುಭವದಲ್ಲಿರುತ್ತದೆ. ಅಜ್ಞಾನದಿಂದ ನಾನು ದೇಹ ಇಂದ್ರಿಯಗಳು
ಎಂದು ಭ್ರಾಂತನಾಗಿ ತನಗಿಂತ ಪ್ರತ್ಯೇಕವಾಗಿ ನಾನಾ ವಿಷಯಗಳು ಇರುವುವೆಂದು ತಿಳಿಯು
ತ್ತದೆ. ಅವುಗಳಲ್ಲಿ ರಾಗ ದ್ವೇಷಾದಿಗಳು ಉಂಟಾಗುತ್ತವೆ. ಇದರಿಂದ ಪ್ರ
ವೃತ್ತಿ ನಿವೃತ್ತಿರೂಪ ಕರ್ಮಗಳು ನಡೆಯುತ್ತವೆ. ಇದರಿಂದ ಪಾಪ ಪುಣ್ಯ
ಗಳು ಉಂಟಾಗುತ್ತವೆ. ಇದರಿಂದ ಜನ್ಮ ಬರುತ್ತದೆ. ಸುಖದುಃಖಗಳು ಬರು
ತ್ತವೆ. ನಾನು ಎಲ್ಲಿ ನಾಶವಾದೇನೋ ಎಂಬ ಭಯವೂ ಬರುತ್ತದೆ. ಈ
ಅನರ್ಥ ಪರಂಪರೆಯೆಲ್ಲಾ ನಾನು ಅಕರ್ತ ಅಭೋಕ್ತೃ ಆತ್ಮನು ಎಂಬ
ಜ್ಞಾನದಿಂದ ಹೋಗುತ್ತದೆಯೇ ಹೊರತು ಜಪ ತಪ ಮಂತ್ರ ಸಾಧನೆಯಿಂದ
ಅನರ್ಥ ಬಿಟ್ಟು ಹೋಗುವುದಿಲ್ಲ.

ತತ್ ಸತ್ ಬ್ರಹ್ಮ
↓
ಸಂಕಲ್ಪರೂಪ = ಹಿರಣ್ಯಗರ್ಭ
↓ ↓
ಕಾರಣಾವಸ್ಥೆ = ವಿರಾಟ್ (ರಾತ್ರಿ) ಪ್ರಜಾಪತಿ = ಕಾರ್ಯಾವಸ್ಥೆ (ಹಗಲು)
ಭೂತತನ್ಮಾತ್ರ = ಕಾರ್ಯರೂಪಗಳು = ಮನು-ಶತರೂಪಾ
↓ ↓
ಸ್ಥೂಲಭೂತಗಳು ಸರ್ವಪ್ರಾಣಿಗಳು.

ಯದಾ ವಿಸೃಷ್ಟಃ ಪುರ ಆತ್ಮನಃ ಪರೋ ರಜಃ ಸೃಜತ್ಯೇಷ ಪೃಥಕ್ ಸ್ವಮಾಯಯಾ
ಸತ್ತ್ವಂ ವಿಚಿತ್ರಾಸು ರಿರಂಸುರೀಶ್ವರಃ ಶಯಿಷ್ಯಮಾಣಸ್ತಮ ಈರಯತ್ಯಸೌ ॥

(ಬ್ರಹ್ಮಾ) ಭೋಗಾಯ (ಜೀವಾತ್ಮನಃ) ರಜೋಮಯಾನಿ ಶರೀರಾಣಿ ಸೃಜತಿ।

(ವಿಷ್ಣುಃ) ರತಯೇ (ಕ್ರೀಡಿತುಮಾತ್ಮನಃ) ಶರೀರೇಷು ಸತ್ತ್ವಮಯೀಃ ವೃತ್ತೀಃ ಸೃಜತಿ।

(ಶಿವಃ) ಲಯಾಯ (ಬಾಧಾಸ್ವೇನ) ಸರ್ವೇಷಾಂ ಭಾವಾಭಾವವಿಭಾವನಾನಾಂ ತಮೋರೂಪಾಂ
ಅವಸ್ಥಾಮಾತ್ರಾಂ ಚ ಸೃಜತಿ ॥ ಸ್ವಯಂ ಸಮಭಾವಃ ಸನ್ನೇವ ಸ್ವಪ್ರಕೃತೇಃ
ತಾಸು ತಾಸ್ವವಸ್ಥಾಸು ಏಕೈಕಾಂಶಸ್ಯಾಧಿಕ್ಯಂ ನಯತಿ. ಅತಃ ಮೂರ್ತಿತ್ರಯಾತ್ಮಾ ॥

ಯತೋ(ಽ)ಪ್ರಾಪ್ಯ ನ್ಯವರ್ತಂತ ವಾಚಶ್ಚ ಮನಸಾ ಸಹ।
ಅಹಂ ಚಾನ್ಯ ಇಮೇ ದೇವಾಸ್ತಸ್ಮೈ ಭಗವತೇ ನಮಃ॥

आत्मा साक्षी यतस्तस्य द्रष्टुः दर्शनाख्या शक्तिश्च स्वाभाविक्येव । सैव मायाख्या सदसदात्मिकेति ॥

ಇವನು ನಾನು, ನಾನು ಎಂಬ (ಜ್ಞಾನ) ಪ್ರತ್ಯಯಕ್ಕೆ ಮುಖ್ಯ(ಪ್ರಾರ)ಗಾ ಆತ್ಮನು ಚೇತನಸಾಕ್ಷಿಯಾಗಿರುವುದರಿಂದ ದ್ರಷ್ಟೃವಾಗಿರುವುದೇ ಅವನ ಸ್ವಭಾವವಾಗಿರುತ್ತೆ. ಅಂದರೆ ದ್ರಷ್ಟೃತ್ವ ಅಥವಾ ದರ್ಶನಶಕ್ತಿಯು ಸ್ವಾಭಾವಿಕವೆಂದೇ ಸಿದ್ಧಿಯುತಲ್ಲವೇ! ಆ ಶಕ್ತಿಯೇ ಪ್ರಕೃತಿ-ಸ್ವಭಾವ. ಪುರುಷನ ಸ್ವರೂಪಾನುಭವಕ್ಕೆ ಮರೆಯಾಗಿರುತ್ತೆ. ಆ ಮರೆಯೇ ಮಾಯೆ ಅಥವಾ ಅವಿದ್ಯೆಯು. ಪ್ರಾಜ್ಞನಲ್ಲದ ಮನುಷ್ಯನು ಕ್ಷಾರ್ಯವಾದನಾಸಕ್ತನಾಗಿ ದೃಶ್ಯಕ್ಕೆ ಬೆಲೆಕಟ್ಟಿಕೊಂಡು ದ್ರಷ್ಟೃವೇ ಆಗಿದ್ದುಕೊಂಡು ಸರ್ವದಾ ಭ್ರಾಂತನೇ ಆಗಿರುತ್ತಾನಲ್ಲ!

ಆದ್ದರಿಂದ ನಿಜಾತ್ಮನು (ಪುರುಷನು) ನಿತ್ಯಮುಕ್ತನಾಗಿದ್ದರೂ ಸ್ವಸ್ವರೂಪ ಪರಿಶೋಧನೆ-ನಿಶ್ಚಯಾನುಭವ-ವಿದ್ಯೆಯಿಲ್ಲದ್ದರಿಂದ ಸಂಸಾರಿಯು ಕ್ಲೇಶದಾಸ ಆಗಿ ತಾಪತ್ರಯಕ್ಕೊಳಗಾಗಿರುತ್ತಾನೆ. ಈ ಭ್ರಾಂತಿಯು ಎಂದಿನಿಂದಾಯಿತು ಎಂಬ ಪ್ರಶ್ನೆಗೆ ಸಮಂಜಸೋತ್ತರವು ನಿಲುಕುವುದಿಲ್ಲವಾದ್ದರಿಂದ ಅನಾದಿ ಎಂದು ಹೇಳುವರು. ಆದರೆ ಈ ಭ್ರಾಂತಿಯ ಅವಸಾನಸ್ಥಿತಿಯು ಮಾತ್ರ ಶಾಸ್ತ್ರಗಳಲ್ಲಿ ಬಹಳ-ಸ್ಪಷ್ಟವಾಗಿ ವರ್ಣಿಸಲ್ಪಟ್ಟಿರುತ್ತೆ. ಭಾಗವತ ೩-೭-೯ರಿಂದ ೧೩ರವರೆಗಿನ ಶ್ಲೋಕಗಳನ್ನು ನೋಡಿ. ಅಮುಷ್ಯ ಪುಂಸ ಆತ್ಮವಿಪರ್ಯಯಃ (ಭ್ರಾಂತಿಕಲ್ಪಿತ ಎಂದರ್ಥ) ಅನ್ಯಥಾರೂಪವು ಹುಟ್ಟಿಕೊಂಡಿರುವುದು. ಮನುಷ್ಯನು ತನ್ನ ತಲೆಯನ್ನು ಸ್ವಪ್ನದಲ್ಲಿ ಬೇರೆ ಮಾಡಿ ನೋಡಿಕೊಂಡಿದ್ದನೆ.

ಭಾಗ — ಯದೇಂದ್ರಿಯಾಣ್ಯಶೇಷಾಣಿ ಪ್ರವೃತ್ತಾನಿ ವಶೇ ಕೃತೇ |
ವಿಷಯಾಂತೇ ತದಾ ಕ್ಲೇಶಾ: ಸಂಸುಪ್ತಸ್ಯೇವ ಕೃಷ್ಣಕಃ || ಎಂಬುದೆ

ಸ್ವಸ್ವರೂಪದ [ಸಾಕ್ಷಾತ್ಕಾರ] ನಿಜಾತ್ಮನಲ್ಲಿ ಸ್ವಸ್ವರೂಪನಿಶ್ಚಯವುಂಟಾಗಿ
ಇಂದ್ರಿಯಗಳೆಲ್ಲ ಲಯಹೊಂದಿದಾಗ ಕ್ಲೇಶಗಳೆಲ್ಲ ತೊಲಗುವುವು. ಎಂದಾ-
-ಕಬಲ್ಲ ತನ್ನ ಸ್ವರೂಪಕ್ಕಿಂತಾ ಬೇರೆ ಇರುವ ರೀತಿಯಲ್ಲಿ ಎಂದು ಅರ್ಥವಾ
ಡಿಕೊಳ್ಳಬಾರದು ಸುಪ್ತಸ್ಯೇವ ಎಂದು ಉಪಮಾನವಿರುತ್ತೆ. ಮತ್ತು
ವಿಪರ್ಯಯ: ಎಂಬ ಮಾತಿಗೂ ಸ್ಥಾನವಿಲ್ಲದಂತಾಗುವುದು. ನಿದ್ರೆಹೋಗು
ಗಾಢ ನಿದ್ರೆ ಮನುಷ್ಯನು ಎಚ್ಚರದಲ್ಲಿ ಜಾಗ್ರತ್ಯವಸ್ಥೆಯೊಂದಿರುತ್ತಾನೋ
ಅವನೇ ಸುಪ್ತಿಯಲ್ಲಿ ಆತ್ಮಾರಾಮನಾಗಿರುತ್ತಾನೆಂಬ ಸಾರ್ವತ್ರಿಕಾನುಭವವನ್ನು
ಇಲ್ಲಿ ನಿದರ್ಶನವಾಗಿ ಕೊಟ್ಟಿದೆ.

ಆದ್ದರಿಂದ ನಿಜವಾದ ಸ್ವಸ್ವರೂಪವು [ಮತ್ತು] ಶುದ್ಧಸ್ವರೂಪವು ಒಂದೇ.
ಅದೇ ಆತ್ಮ. ಮಧ್ಯಮ ಪುರುಷನಾದ ನೀನು, ಉತ್ತಮಪುರುಷನಾದ
ನಾನು, ಪ್ರಥಮಪುರುಷನೆಂಬ ಇವನು - ಅವನು - ಎಲ್ಲವೂ
ಆತ್ಮವೇ, ಅವನೇ ಪುರುಷೋತ್ತಮ - ಸನ್ಮಾತ್ರ - ಪರಮಾತ್ಮನಾಗಿದ್ದಾನೆ.

14.3.67.

ಏಕಾಂತಲಾಭಂ ವಚಸೋ ನು ಪುಂಸಾಂ
ಸುಶ್ಲೋಕಮೌಲೇರ್ಗುಣವಾದಮಾಹುಃ |
ಶ್ರುತೇಶ್ಚ ವಿದ್ವದ್ಭಿರುಪಾಕೃತಾಯಾಂ
ಕಥಾಸುಧಾಯಾಮುಪಸಂಪ್ರಯೋಗಂ ||

ನಿದ್ದೆಯಲ್ಲಿರುವ ಮನುಷ್ಯನಿಗೆ ಭಯವೇ ಇರುವುದಿಲ್ಲ. ನಿರ್ಭಯನಾಗಿ ಇರುತ್ತಾನೆ. ಅವನಿಗೆ ಏತಕ್ಕೆ ಭಯವುಂಟಾಗುವುದಿಲ್ಲ? ಎಂದರೆ ಅವನಿ[ಗೆ] ತನ್ನ ಸ್ವರೂಪಕ್ಕಿಂತ ಭಿನ್ನವಾಗಿ ಏನೊಂದೂ ತೋರುವಂತಹದ್ದು ಇಲ್ಲವಾದ್ದರಿಂದಲೇ ಎಂದ[ು] ಉತ್ತರವಲ್ಲವೇ! ಅದೇ ನಿದ್ರಾವಸ್ಥೆಯ ಮಧ್ಯಂತರದಲ್ಲಿ ಕನಸನ್ನು ಕಾಣುತ್ತಾನೆಂದು ಇಟ್ಟುಕೊಂಡರೆ ಆಗ ಸುಖದುಃಖಾದಿಗಳು ಬಂದೇ ಬರುವುವು. ಕಾರಣ, ಕನಸಿನಲ್ಲಿ ತನ್ನ ಸ್ವರೂಪಕ್ಕಿಂತ ಭಿನ್ನವಾಗಿ ನಾನಾತ್ವವನ್ನು ಕಾಣುವನು ಆದ್ದರಿಂದಲೇ ಭಯಕ್ಕೆ ಬಲಿಯಾಗುವನು ಹೀಗೆ ವಾಸ್ತವಸ್ಥಿತಿಯಿರುವುದರಿಂದ ಒಂದು ನಿರ್ಣಯವನ್ನು ಮಾಡಬಹುದಾಗಿದೆ — ಯಾವನು ಪರಮಾರ್ಥವು ಅದ್ವೈತವೇ ಆಗಿದ್ದರೂ ನಾನಾತ್ವವಿರುವಂತೆ ಕಾಣುವನೋ ಅವನು ಕನಸಿನಲ್ಲಿ ನಾನಾತ್ವವನ್ನು ಕಂಡು ಭ[ಯ]ಯಾದಿಗಳನ್ನು ಪಡೆಯುವಂತೆ ಭಯದ ಮೇಲೆ ಮರಣಾದಿ ಭಯಗಳನ್ನು ಹೊಂದುವನು. ಆಧಾರ — ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯ[ತಿ]

ಪ್ರಾಣಿಗಳು ಸುಖವಾಗಿ ಮಲಗಿರುತ್ತವೆ. ಮನುಷ್ಯನು ಸುಖವಾಗಿ
ನಿದ್ರಿಸಿರುತ್ತಾನೆ. (ಸಮಷ್ಟಿ ದೃಷ್ಟಿಯಿಂದ - ಬಾಹ್ಯ ದೃಷ್ಟಿಯಿಂದ) ಇದನ್ನೇ ಆಯಾಯಾ
ಅಂತರಾತ್ಮನ ದೃಷ್ಟಿಯಿಂದ ವಿಚಾರಮಾಡಬೇಕು) ಆ ಮೊದಲು ಇರುತ್ತಿದ್ದ ವಿಶೇಷಗಳ
ಅನುಭವಗಳು ಸಕಲವೂ ಲೀನವಾಗಿರುತ್ತವೆ. ಲಯ ಹೊಂದಿರುತ್ತವೆ. ಅಂದರೆ ಪ್ರಕೃತಿ
ಯೊಡನೆ ಐಕ್ಯವಾಗಿರುತ್ತವೆ (ಈ ಮಾತು - ಪುನಃ ಎಚ್ಚರ (ಜಗತ್ತು) ಎಂಬುದು ಇರುತ್ತೆ
ಯಾಗಿ) ಅಂದರೆ ಕಾರಣಶರೀರದಲ್ಲಿ ಕಾರ್ಯಗಳು ವಶವಾಗಿವೆ = ಇದು ಪ್ರಾಕೃತಲಯ -
ಇದೇ ನಿದ್ರೆ - ವ್ಯಷ್ಟಿ ದೃಷ್ಟಿಯಿಂದ. ಸಮಷ್ಟಿ ದೃಷ್ಟಿಯಿಂದಲೂ ಪ್ರಲಯವು ಬ್ರಹ್ಮನ
ಪ್ರಕೃತಿಯಲ್ಲಿ ಅಂದರೆ ಮಾಯೆಯಲ್ಲಿ ಅಂದರೆ ಮಾಯೆಗೆ ಸ್ವರೂಪಸತ್ತಾವೇ
ಇಲ್ಲದುದರಿಂದ, ಆ ಮಾಯೆಗೆ ಆಶ್ರಯಾಧಾರದಲ್ಲಿ ಈ ವಿಶೇಷವತ್ತಾದ ಜಗತ್ತು
ಸಕಲವೂ ವಿಲೀನವಾಗಿರುತ್ತದೆ (ಈ ಮಾತು ಕೂಡ - ಪುನಃ ಜಗತ್ತು ವಿಶೇಷವು
ಇರುತ್ತೆ ಎಂಬ ದೃಷ್ಟಿಯಿಂದ ಹೇಳಿದುದು) ಅಂದರೆ ಕಾರ್ಯಗಳೆಲ್ಲಾ ಸ್ವಾಧಾರವಾದ
ಅವ್ಯಕ್ತದಲ್ಲಿ ಅಂದರೆ ಬ್ರಹ್ಮನಲ್ಲಿ ಐಕ್ಯ ಹೊಂದಿರುತ್ತವೆ. ಇದು ಪ್ರಾಕೃತಲಯವು.

ಇನ್ನು ಎಚ್ಚರವಾಗುವ ಸಮಯವನ್ನು ವಿಚಾರಮಾಡಬೇಕು.

ಕರ್ಮವಶಾತ್ತು ಎಚ್ಚರವಾಗುವುದು - ಇದು ಕರ್ಮಫಲವೇ. ಕಾರ್ಯವಾಗಲು
ಉತ್ತೇಜನ ಹೊಸಕರ್ಮ ಅಜ್ಞಾನ = ಸ್ವರೂಪಾಜ್ಞಾನ ಸಹಿತವಾದುದು ಅದೇ ಪ್ರಧಾನದಿಂದಲೇ ಕಾರಣದಿಂದ = ಕಾರಣಶರೀರ -
ಆನಂದಮಯ (~~...~~) ಆ ಸ್ವರೂಪದ ಕಾರ್ಯವುತ್ಪನ್ನವಾಗುವುದು. ಅಂದರೆ ಶರೀ
ರಾದಿಸೃಷ್ಟಿ. ಅದೇನು ಕ್ರಮವಾಗಿ ಅಲ್ಲವು. ಅಜ್ಞಾನವಿರಲು ಕರ್ತೃತ್ವಾದಿಗಳಿರಲು
ಅಧ್ಯಾರೋಪವೆಂಬ ಅಧ್ಯಾಸವಾಗಲು ಭ್ರಾಂತಿಜ್ಞಾನವುದಯಿಸಲು ಭೇದದೃಷ್ಟಿ
ವಿಷಯವಿಷಯಿ ಭೇದವೆಂಬ ಕಾಲ್ಪನಿಕ ಭೇದದಿಂದಲಾದ ದೇಹಾಂತಸ್ಥೂಲಭಾವ
ಪರ್ಯಂತ ಸಕಲ ವಿಶೇಷ ಜ್ಞಾನವು ರಜ್ಜುಸರ್ಪದಂತೆ (ತಪ್ಪು ತಿಳುವಳಿಕೆಯು) ಉತ್ಪನ್ನವಾಗುವು
ದು. ಇದೇ ಸೃಷ್ಟಿಯು. ಅದ್ದರಿಂದ ಸೃಷ್ಟಿಯು ಕಾರಣಶರೀರದಲ್ಲಿ
ಕಲ್ಪಿತ ಪುರುಷ ದೃಷ್ಟಿಯಿಂದ ಸೃಷ್ಟಿಗೆ ಸ್ಥಿತಿಯು

1 ಅಹಂಬುದ್ಧಿ ಎಂದರೆ ಅಹಂಕಾರ - ವಿಷಯದ ಅಭಿಮಾನಿತ್ವ

2 ಆತ್ಮಬುದ್ಧಿ ಎಂದರೆ ನಿರ್ವಿಶೇಷಜ್ಞಾನಸ್ವರೂಪನೇ ನಾನೆಂಬ ಸಮ್ಯಗ್ಜ್ಞಾನ

ಬ್ರಹ್ಮವು = ಆತ್ಮನು. ಎಲ್ಲ ಪ್ರಾಣಿಗಳ ಅಂತರಾತ್ಮನೇ ಮುಖ್ಯಾತ್ಮನು.
ಈ ಆತ್ಮನನ್ನು ಶೋಧನೆಮಾಡಿ ತಿಳಿದುಕೊಳ್ಳುವಾಗ ವ್ಯವಹಾರವಿರುತ್ತದೆ.
ಈ ವ್ಯವಹಾರದಶೆಯಲ್ಲಿ ಅಂದರೆ ವ್ಯವಹಾರದೃಷ್ಟಿಯಿಂದ ಈ
ಬ್ರಹ್ಮಾತ್ಮನು ಜೀವನ ಅವಿದ್ಯೆಗೆ ವಿಷಯ ಹಾಗೆ ಆಶ್ರಯನಾಗಿರುತ್ತಾನೆ.
ಜೀವನು ಅವಿದ್ಯಾವಂತನಾಗಿ ವಿಕಾರವುಳ್ಳವನಾಗಿರುತ್ತಾನಷ್ಟೇ ಪರಂತು
ಬ್ರಹ್ಮಾತ್ಮನಲ್ಲಿ = ಮುಖ್ಯಾತ್ಮನಲ್ಲಿ ಅವಿದ್ಯೆಯು ಇರುವುದಿಲ್ಲ.
ಆ ಮುಖ್ಯಾತ್ಮನು ಕೇವಲ ಸ್ವಸಂವೇದ್ಯನಾಗಿರುವುದರಿಂದ ಮನಸ್ಸಿಗೆ
ಅವಿಷಯನಾಗಿರುವುದರಿಂದಲೇ ಅವಿದ್ಯೆಗೂ ವಿಷಯನಾಗಿರ
ವುದಿಲ್ಲ = ಇದು ಪರಮಾರ್ಥದೃಷ್ಟಿ - ಬ್ರಹ್ಮದೃಷ್ಟಿ.

(1) ಜಾಗ್ರತ್ಕಾಲದಲ್ಲಿರುವ ಪುರುಷನಿಗೆ ಬ್ರಹ್ಮಾತ್ಮಸ್ವರೂಪವನ್ನು ತೋರಿಸಿಕೊಡಲು ಪಂಚಕೋಶನಿರಾಕರಣ - ಪ್ರಕ್ರಿಯೆಯನ್ನು ಉಪದೇಶಿಸಿರುತ್ತೆ.

(2) ಪುರುಷನ ಸಾರ್ವಕಾಲಿಕತ್ವವನ್ನು ಮುಖ್ಯವಾಗಿ ಅವಿಕಾರಿತ್ವವನ್ನು ತೋರಿಸಿಕೊಡಲು ಅವಸ್ಥಾತ್ರಯವನ್ನು ವಿವೇಚಿಸಿ ಉಪದೇಶಿಸಿದೆ.

ಯಥಾ ರಾಹುಗ್ರಸ್ತಶ್ಚಂದ್ರಮಾಃ ಸ್ವಕೀಯೋಜ್ಜ್ವಲತ್ವಾದ್ ಚ್ಯುತಸ್ಸನ್
ಸ್ವಯಂ ಮಲಿನೋಽಬಲೋ ಭಾಸಮಾನೋ ರಾಹುಂ ಚಾವಭಾಸಯನ್ ತೇನ ರಾಹು
ಣಾ ತಾದಾತ್ಮ್ಯಂ ಪ್ರಾಪ್ತ ಇವ ಅವಭಾಸತೇ ತಥೈವಾಯಮಪ್ಯಾನಂದ
ರಸೈಕಶ್ರೀರಾತ್ಮಾ ಸ್ವಯಮನಾದ್ಯವಿದ್ಯಾಪಟಲೇನಾವೃತಃ ಸನ್ ಅಸ್ಮಿನ್ನಯಸ್ಮ
ನ್ನಾಸಂಕ್ಷಿಪ್ತರಸತ್ವಃ ಚ್ಯುತಸ್ಸನ್ ಬಹುವಿಧ ದ್ವೈತರೂಪೇಣ ಜಗ
ಯುಕ್ತೋ ದುಃಖೀ ಸ್ವಕೀಯತ್ವೇನ ಸ್ವಾತ್ಮಾನಮವಿದ್ಯಾಂ ಚಾವಭಾಸಯನ್ ಸ್ವಾವಿ
ದ್ಯಯಾ ತಾದಾತ್ಮ್ಯಂ ಪ್ರಾಪ್ತ ಇವಾಹಮಜ್ಞ ಇತ್ಯೇಕೀಭೂಯ ವ್ಯವಹರತಿ ।
ಸೋಽಯಂ ಶೀತೋಷ್ಣಾದಿದ್ವಂದ್ವಗ್ರಾಹಃ । ಸಚ ಬುದ್ಧ್ಯಾ ನ ವಿಶೀರ್ಯತೇ ॥

ಋತೇಽರ್ಥಂ ಯತ್ಪ್ರತೀಯೇತ ನ ಪ್ರತೀಯೇತ ಚಾತ್ಮನಿ ।
ತದ್ವಿದ್ಯಾದಾತ್ಮನೋ ಮಾಯಾಂ ಯಥಾಽಽಭಾಸೋ ಯಥಾ ತಮಃ ॥
ಇತಿ ಭಾಗವತೇ ಮಾಯಾಲಕ್ಷಣಂ ಭಗವತೋಕ್ತಂ ಪಠಿತಂ (2-9) ಅರ್ಥಂ ವಿನಾ
ವಾಸ್ತವಾರ್ಥಂ ವಿನೈವ ಯತ್ಕಿಮಪ್ಯನಿರುಕ್ತಂ ಆತ್ಮನ್ಯಧಿಷ್ಠಾನೇ ಪ್ರತೀಯತೇ ।
ಸದಪಿ ಚಾತ್ಮತತ್ತ್ವಂ ನ ಪ್ರತೀಯತೇ ತತ್ ಆತ್ಮನೋ ಮಾಯಾಂ ವಿದ್ಯಾತ್ ।
ದ್ವಿಚಂದ್ರಾದಿಃ ಆಭಾಸಃ । ರಾಹುವತ್ ಪ್ರತಿಭಾಸತೇ । ಅರ್ಥಂ ವಿನಾ
ಪ್ರತೀತೌ ದೃಷ್ಟಾಂತಃ ॥ ಸತೋಽಪ್ಯಪ್ರತೀತೌ ದೃಷ್ಟಾಂತಃ — ತಮೋ
ರಾಹುಃ ಗ್ರಹಮಂಡಲೇ ಸ್ಥಿತೋಽಪಿ ನ ದೃಶ್ಯತೇ ।

ದ್ವಿಧಾ ಸೃಷ್ಟಿಃ ಅಬುದ್ಧಿಪೂರ್ವಕಾ - ಬುದ್ಧಿಪೂರ್ವಿಕಾ ಚೇತಿ

ಅಬುದ್ಧಿಪೂರ್ವಾ - ಪ್ರಾಕೃತಸೃಷ್ಟಿಃ (ತಮೋಮಯಸರ್ಗಃ) =
1 ಮಹತ್ತತ್ತ್ವಸರ್ಗಃ
2 ತನ್ಮಾತ್ರಭೂತಸೃಷ್ಟಿಃ
3. ವೈಕಾರಿಕ ಇಂದ್ರಿಯಾದಯಃ

ಬುದ್ಧಿಪೂರ್ವಃ (ಪ್ರಾಕೃತ) ವೈಕೃತಿಕಃ ಸರ್ಗಃ =
4 ಸ್ಥಾವರಸರ್ಗ
5 ತಿರ್ಯಕ್ಸ್ರೋತಃ
6 ಊರ್ಧ್ವಸ್ರೋತಸಾಂ ದೇವಾನಾಂ ಸರ್ಗ
7 ಅರ್ವಾಕ್ಸ್ರೋತಸಾಂ ಮನುಷ್ಯಾಣಾಂ ಸರ್ಗಃ
8 ಅನುಗ್ರಹಃ ಸರ್ಗಃ ಸಾತ್ತ್ವಿಕತಾಮಸಸೃಷ್ಟಿಃ

ಪುಟ 44

ಕೌಮಾರೋ ನವಮಃ ಸರ್ಗಃ = ಪ್ರಾಕೃತೋ ವೈಕೃತಶ್ಚ

ತಸ್ಯಾ ದೇವತಾ ಅನೇನ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ
ಸಮುದ್ರಾನ್ನದ್ಯಃ ಪ್ರಭವಂತಿ ಸಮುದ್ರೇ ನಸ್ತಂ ಗಚ್ಛಂತಿ ದೃಷ್ಟಾಂತಃ ಪ್ರೈತಕ್ಷೋದಕ
ಪಿನ್ಯಗಾಜಾನಸ್ತ್ರ ಕ್ಷುಧ್ಯಲೋಕಾ ಭವಂತಿ ತೇಷಾಮಕಾಮಚಾರಃ।
ಅಥ ಯೋ ವೇದ ಸ ಸ್ವರಾಟ್ ಭವತಿ ಸ ಕಾಮಚಾರೋ ಭವತಿ।
ಆತ್ಮಾನಮನನುವಿದ್ಯ ವಿಜಾನಾತಿ (ಪರೋಕ್ಷಾನುಭವ - ಅಪರೋಕ್ಷಾನುಭೂತಿ)
ಯಃ ಸಂಪ್ರಸನ್ನಃ ಸ್ವಪ್ನಂ ನ ವಿಜಾನಾತಿ ಏಷ ಏವ ಆತ್ಮಾ - ಏತದಮೃತಮಭಯ
ಮೇತದ್ ಬ್ರಹ್ಮ = ಸೇತು ವಾನ್ನತ್ರೈವ ತಸ್ಮಾತ್ ।
ಸ್ವೇನ ರೂಪೇಣಾಭಿನಿಷ್ಪದ್ಯತೇ।

{ ಅಜೋ ಯದ್‌ಬ್ರಹ್ಮ ವಿಲಂಬಂ = ಸಮೋಷಾಮುಪಲಂಬನಂ ....
{ ಸ ಹ್ಯೇವಾಸ್ಮಿ ಸನಾತನಃ (ಅರು. ೨೧ ಪುಟ)

(ಅಗ್ನ್ಯದಿತ್ಯೌ ತ್ರಿವಾಜ್ಞಾನಸ್ಯ ಮಥನಸಂಸ್ಕೃತಾಂ ತತಃ ಪ್ರಾಣೋ ಅಜಾಯತ
ಸ ಇಂದ್ರಃ, ಸ ವಷ್ಟೋಽಸಪತ್ನೋ ದ್ವಿತೀಯೋ ವೈ ಸಪತ್ನೋ ನಾಸ್ಯ ದ್ವಿತೀಯಃ
ಸ ಯ ಏವಂ ವಿತ್ ಸಪತ್ನಾನಾಂ ಭಗವಾನಾತ್ಮಾ ಭವತಿ ಯಷ್ಟೈವಾದಾ

ಯ ಇಮಂ ಮಧ್ವದಂ ವೇದ ಆತ್ಮಾನಂ ಜೀವಮಂತಿಕಾತ್ }
ಈಶಾನಂ ಭೂತಭವ್ಯಸ್ಯ ನ ತತೋ ವಿಜುಗುಪ್ಸತೇ

ಉಚ್ಚಾವಚ ಭೋಗಗಳಿಗೆ ಸಿಲುಕಿರುವಾತನು ವಿಭ್ರಾಂತಿಗೊಳ್ಳು [illegible]
ಭಯವುಂಟು, ಇತರನಾಗುವುದೂ ಸ್ವಾಭಾವಿಕ. ಇಂತಹ ಭಾವನಾಗೊಂದಲಗಳಿಗೆ
ಸಿಲುಕಿರುವಾತನು ವಸ್ತುನಿರ್ಣಯಕ್ಕೆ ಬರುವುದೂ ಕಷ್ಟ. ಈ ಸ್ಥಿತಿಯಲ್ಲಿರುವಾತ
ಈಶ್ವರನಿಗೆ ಶರಣಾಗತನಾಗಬೇಕು. ಈಶ್ವರಾನುಗ್ರಹದಿಂದ ಮೋಕ್ಷವೆಂದು
ಶಾಸ್ತ್ರಸಿದ್ಧ. ವಿಪ್ರತಿಪತ್ತಿಯಿಲ್ಲ. ಆದರೆ ಮೃತ್ಯುವನ್ನು ಗೆದ್ದು ಮೃತ್ಯುಂಜಯ-
ನಾಗಬೇಕಾದರೆ ಧೈರ್ಯಬೇಕು. ಅಧ್ಯಾತ್ಮವಿಜ್ಞಾನವು ಧೀರರ ಮಾರ್ಗವು.
ಆತ್ಮನಾತ್ಮಾನಮುದ್ಧರೇತ್, ಮುಂಜಾದಿವೇಷೀಕಾಂ ಧೈರ್ಯೇಣ ಎಂದು ಹೇಳಿರುವ
ತುರೀಯಾತ್ಮವೇ ಮನುಷ್ಯನ ನಿಜವಾದ ಆತ್ಮವೆಂದೂ ಆ ತುರೀಯಾತ್ಮವು
ಶುದ್ಧಬುದ್ಧಮುಕ್ತಸದಾನಂದಸ್ವರೂಪವಾಗಿರುತ್ತೆಂದೂ ಅದೇ ತಾನಾಗಿರು-
ವುದರಿಂದ ನಿತ್ಯಮೋಕ್ಷವು ಹೊಂದುವುದೆಂದೂ ನಿರ್ಣಯಮಾಡಿ[illegible]
ಬೇಕು.

ದ್ವೈತವು ಅಧ್ಯಾತ್ಮವಿಜ್ಞಾನವಲ್ಲ, ಬ್ರಹ್ಮವಿದ್ಯೆ ಎನಿಸಲಾರದು. ಕನಿಷ್ಠನು
ಸ್ವಾಭಾವಿಕವಾದ (ಅವಿಚಾರಸಿದ್ಧವಾದ) ದ್ವೈತವನ್ನೇ ಅನುವಾದಿಸಿ
ಭಗವದಾರಾಧನೆಯಿಂದ ಭಗವತ್ಪ್ರೀತಿಯನ್ನು ಸಂಪಾದಿಸಬೇಕೆಂಬ
ಉಪದೇಶ. ಈ ಮತದಲ್ಲಿ ಭೋಗ ಭೋಗ್ಯ ಭೋಕ್ತೃ ಎಲ್ಲಾ ಉಂಟು

ಅಂಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ ಎಂದು ಹೇಳಿರುವ
ಆ ಪ್ರಿಯತಾತ್ಮನೇ ಅಧ್ಯಾಮಿಕನು = ಅಂತರತಮಾತ್ಮನು ಭೂತಭವ್ಯಸ್ಯೇಶಾನನು
ಸ ವಾದ್ಯ ಸ ಉ ಶ್ವಃ ಎಂದು ಉಪದೇಶಿಸಿದೆ = ತಂ ವಿದ್ಯಾಚ್ಛುಕ್ರಮಮೃತಂ ।

ವಿಮುಕ್ತಶ್ಚ ವಿಮುಚ್ಯತೇ .

ಪರೇಽವ್ಯಯೇ ಸರ್ವ ಏಕೀಭವಂತಿ

ಸ ಯೋ ಹ ವೈ ತತ್ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ

ಅಯಮಾತ್ಮಾ ಬ್ರಹ್ಮ ಸೋಽಯಮಾತ್ಮಾ ಚತುಷ್ಪಾತ್

ತನಗಿಂತ ಪ್ರತ್ಯೇಕನಾದ ರಾಜನನ್ನು ಎಷ್ಟೇ ಸೇವಿಸಿದರೂ ಸೇವಕನಿಗೆ ಸೇವಕತ್ವ ತಪ್ಪುವುದಿಲ್ಲ. ರಾಜತ್ವ ಸಾಮ್ಯವೂ ಸಿದ್ಧಿಸುವುದಿಲ್ಲ. ಇದು ಲೌಕಿಕ ಯುಕ್ತಿ - ಅಲೌಕಿಕ ಬ್ರಹ್ಮವಿಷಯಕ್ಕೆ

ಬ್ರಹ್ಮವಿದ್ ಬ್ರಹ್ಮೈವ ಭವತಿ - ಬ್ರಹ್ಮವಿದಾಪ್ನೋತಿ ಪರಂ ।
ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ
ವಿಮುಕ್ತಶ್ಚ ವಿಮುಚ್ಯತೇ
ಅಹಮಸ್ಮಿ ಬ್ರಹ್ಮಾಹಮಸ್ಮಿ
ಅದ್ವೈತೋ ಭವತಿ
ಏಕೀಭವತಿ - ಪಶ್ಯನ್ ವೈ ನ ಪಶ್ಯತಿ ।
ನಾನ್ಯೋಽತೋಽಸ್ತಿ ದ್ರಷ್ಟಾ
ಸರ್ವಂ ಖಲ್ವಿದಂ ಬ್ರಹ್ಮ
ನೇಹ ನಾನಾಸ್ತಿ ಕಿಂಚನ
ಅನ್ಯೋಽಸೌ, ಅನ್ಯೋಽಹಮಸ್ಮೀತಿ ಯೋ ವೇದ, ನ ಸ ವೇದ.
ಯಸ್ಯ ಮತಂ ನ ವೇದ ಸಃ
ನೇದಂ ಯದಿದಮುಪಾಸತೇ
ಸ ಬ್ರಹ್ಮ ಸ ಶಿವಸ್ಸ ಹರಿಸ್ಸೇಂದ್ರಸ್ಸೋಽಕ್ಷರಃ ಪರಮಃ ಸ್ವರಾಟ್.
ಯಸ್ಮಾತ್ಕ್ಷರಾದಪರೋಽಕ್ಷರಾದ್ಬ್ರಹ್ಮ - ಏಷ ತ ಆತ್ಮಾ - ಸರ್ವಾಂತರಃ ।
ತತ್ ತ್ವಮಸಿ
ಸರ್ವಮಾತ್ಮಾನಂ ಪಶ್ಯತಿ - ಸರ್ವಮಾಪ್ನೋತಿ ಸರ್ವಶಃ ।
ಸರ್ವಂ ಯದಯಮಾತ್ಮಾ
ತತ್ ಸೃಷ್ಟ್ವಾ ತದೇವಾನುಪ್ರಾವಿಶತ್
ಇತರತರಂ ಯದಯಮಾತ್ಮಾ - ಆತ್ಮಾ ವಾಕ ಏವ
ವಿಜ್ಞಾತಾರಂ ಕೇನ ವಿಜಾನೀಯಾತ್
ಏಕೋ ನಾರಾಯಣಃ ನ ದ್ವಿತೀಯೋಽಸ್ತಿ ಕಶ್ಚಿತ್ ।
ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ

ತತ್ ತ್ವಂ ಅಸಿ. ಈ ವಾಕ್ಯದಲ್ಲಿ ಪದಾರ್ಥಗಳು ಪೃಥಕ್ಕಾಗಿ ವಿಶಿಷ್ಟ
ವಸ್ತುಗಳಾಗಿರುವುದರಿಂದ ವಾಕ್ಯಾರ್ಥವು ಬಾಧಿತವಾಗುವುದರಿಂದ ಲಕ್ಷಣಾಶ್ರಯ ಮಾಡ
ವ್ಯಾಖ್ಯಾನಿಸಿದೆ. ಆದರೆ ಈ ಮತವನ್ನು ಒಪ್ಪಿದರೆ ಇದ್ದದ್ದು ಅನ್ವಿತವಾಗುತ್ತದೆ.
ಪದಾರ್ಥಗಳನ್ನು ಶೋಧಿಸಿಕೊಳ್ಳಬೇಕು. ತತ್ ಎಂದರೆ ಪರವಸ್ತು ಎಂದರ್ಥ
ಆ ವಸ್ತುವು ಬೇರೆ ಕಾಲ ದೇಶ ಕಾರಣ ಕಾರ್ಯ ವಿಶೇಷತೆಯುಳ್ಳ ಎಂದರೆ ವಿಶೇಷ
ಣ ಪ್ರಧಾನವೆನಿಸಿದ ವಿಶಿಷ್ಟ ಜಗತ್ತಿಗಿಂತ ~~[illegible]~~ ವಿಲಕ್ಷಣವಾದದ್ದು
ಆ ಪರಮವಸ್ತು ಅಂದರೆ ಯಾವ ವಿಶೇಷವೂ ಇಲ್ಲದ್ದು ಎಂದರ್ಥ ಮಾಡಿಕೊ
ಳ್ಳಬೇಕು. ಇದ್ದರಿಂದಲೇ ಅದು ಪರಮವು. ಅದೇ ಚೈತನ್ಯಮಯ ಚೇತನವು ನಿರ್ವಿ
ಶೇಷ ಸ್ವರೂಪವಾದದ್ದು ಎಂದು ಸ್ಥಿರವಾಗುವುದು. ಚೈತನ್ಯ ಎಂಬ ಮುಖ್ಯಾರ್ಥ

ತ್ವಂ ಪದಾರ್ಥವನ್ನು ಪರಿಶೋಧಿಸಿದಾಗ ತಿಳಿಯುವುದೇನೆಂದರೆ ಬದ್ಧವಾದ
ಜೀವನವಸ್ತುವು ದೇಹೇಂದ್ರಿಯ ಮನೋ ಬುದ್ಧಿ ಪ್ರಾಣಾದಿಗಳಿಂದ ಎಲ್ಲಾ ವಿಶೇಷ
ಗಳನ್ನು ಕಳೆದು ಉಳಿದ ಅಂದರೆ ಸಾರಭೂತವಾಗಿ ನಿಲ್ಲುವ ವಸ್ತುವು ನಿರ್ವಿ
ಶೇಷ ಚೈತನ್ಯವೇ. ಅದು ಯಾವ ವಿಶೇಷವೂ ಇಲ್ಲದ್ದು. ಚೈತನ್ಯ ಎಂಬುದ
ನ್ನು ಅಸಿ ಎಂಬ ಪದದಿಂದ ಕ್ರಿಯೆಯು ತಿಳಿಯುತ್ತಿಯಾದರೂ ಚೈತನ್ಯ
ದಲ್ಲಿ ಕ್ರಿಯೆಯು ಅಸಂಭವವಾಗುವುದರಿಂದ ಸಾಧನರೂಪ ಕ್ರಿಯೆಯಿಂದ ಫಲ
ರೂಪವಾದ ಚೈತನ್ಯ ಎಂದೇ ಅಸಿ ಪದಕ್ಕೆ ಅರ್ಥಮಾಡಿಕೊಳ್ಳಬೇಕಾಗುತ್ತದೆ
ಇದೇ ಮುಖ್ಯಾರ್ಥವು - ಶೋಧನೆಯಿಂದ ತಿಳಿಯುವುದು.

ಅಂದು ತತ್ ತ್ವಂ ಅಸಿ ಎಂಬ ವಾಕ್ಯಕ್ಕೆ ಚೈತನ್ಯ ಚೈತನ್ಯ ಚೈತನ್ಯ
ಎಂಬರ್ಥ ಅಖಂಡಾರ್ಥ ಬೋಧವಾಗುವುದು

ಈ ವಿಷಯಕ್ಕೆ ಒಂದು ದೃಷ್ಟಾಂತ ಕೊಡಬಹುದು. ಈ ಶ್ಲೋಕ ವಾಕ್ಯ
[ಸಾಂಶ: ಪದಾರ್ಥ ಜ್ಞಾನವು ಅಖಂಡವು ಸಂಬಂಧವಾದ ವಾಕ್ಯಾರ್ಥ ಬೋಧವು
ಉಂಟಾಗುವುದು.

ತಾನು ಪ್ರಕಾಶಿತನಾಗುತ್ತೇನೆಂಬ ಭಾವನೆಯೂ ಅವನಿಗಿ
ಇಲ್ಲ. ಬೆಳಕು ಅವನ ಸ್ವಭಾವ. ಪ್ರಕಾಶ ಸ್ವರೂಪ ಸೂ
ಸೂರ್ಯನು ಬೆಳಗುತ್ತಾನೆ. ಅವನ್ನು ಪ್ರಕಾಶಿಸುತ್ತಾನೆ ಎನ್ನುತ್ತಾರೆ.

ಬೆಳಕು ವ್ಯಾಪಿ. ಎಲ್ಲ ವಸ್ತುವನ್ನು ಬೆಳಗುತ್ತದೆ. ವಸ್ತುಗಳು ಜಡ =
ಬೆಳಗತಕ್ಕವಲ್ಲ = ಪ್ರಕಾಶಿಸುವುದು ಇಲ್ಲ. ವಸ್ತುಗಳನ್ನು ವ್ಯಾಪಿಸಿದಾಗ
ಬೆಳಕೇ ನಮಗೆ ಗೋಚರವಾಗುವುದು. ವಸ್ತುಗಳು ಗೋಚರವಾಗುವುದು
ಬೆಳಕಿನ ಸಂಪರ್ಕದಿಂದ. ವಸ್ತುಗಳ ನಾನಾ ರೂಪ ಆಕಾರ ಬಣ್ಣಗಳು
ನಮ್ಮ ಇಂದ್ರಿಯಕ್ಕೆ ಸಂಬಂಧಿಸಿದವು ಬೆಳಕಿನದೇ ಮುಖ್ಯ. ಏಕೆಂದರೆ
ವಸ್ತು ಕತ್ತಲಲ್ಲಿ ಇದ್ದರೆ ಬೆಳಕಿಲ್ಲದಿದ್ದರೆ ಕಣ್ಣಿಗೆ ಅದು ಪ್ರತ್ಯಕ್ಷ
ವಾಗುವುದಿಲ್ಲ. ಬೆಳಕು ಪ್ರತ್ಯಕ್ಷವಾಗುತ್ತಲೇ ಜೊತೆಗೆ ವಸ್ತು ಪ್ರತ್ಯಕ್ಷ
ವಾಗುತ್ತದೆ. ಇಲ್ಲಿ ಪ್ರತ್ಯಕ್ಷಾನುಭವವು ಬೆಳಕಿನದೇ ಪ್ರಧಾನವಾಗ
ಬೇಕಾದುದು ಉಚಿತ. ಹೀಗಿದ್ದರೆ ಲೌಕಿಕವಾಗಿ ಎನ್ನುವರು ಬೆಳಕಿನ
ಅನುಭವಕ್ಕೆ ಬೆಲೆಯೇ ಇಲ್ಲ. ವಸ್ತುಗಳು ಅವುಗಳ ಬಣ್ಣಗಳು-ಆಕಾರ
ಗಳು ಸಂಬಂಧಿ ಅವುಗಳ ಅನುಭವಕ್ಕೆ ಹೆಚ್ಚು ಬೆಲೆಯುತ್ತಾರೆ.
ಬೆಳಕು ಅಂದರೆ ಸಾಮಾನ್ಯ-ಬಿಂದು. ಆಕಾರ-ರೂಪ. ಅದರಿಂದ ಆಗುವ
ಅರ್ಥಕ್ರಿಯೆಗಿಂತಲೂ ವಸ್ತುಗಳದ ತಮಗೆ ಹೆಚ್ಚು ಅರ್ಥಕ್ರಿಯೆ ಎಂಬ
ಬಲವತ್ತರವಾದ ಕಲ್ಪನೆಯೇ ಮೇಲಿನ ಅನುಭವದಲ್ಲಿ ಪ್ರಧಾನತೆ
ಅಪ್ರಧಾನತೆಗೆ ಕಾರಣವೆಂದು ನಿಶ್ಚಯಿಸಬಹುದಾಗಿದೆ.

ಕೇವಲವಾಗಿರುವ ಜ್ಞಾನವೇ ಜ್ಞೇಯದಂತೆ ತೋರುತ್ತದೆ.

ಜಿಜ್ಞಾಸುವಿನ ಪ್ರಶ್ನೆ :- ಜ್ಞೇಯವೇನೋ ನನಗೆ ಕಾಣಿಸುತ್ತಿದೆ. ಆದರೆ ಯಾವ ಜ್ಞಾನವು ಜ್ಞೇಯದಂತೆ ಕಾಣುವುದೋ ಅದು ತಿಳಿಯದು. ಆ ಜ್ಞಾನವು ಎಲ್ಲಿದೆ?

ಉತ್ತರ :- "ನನಗೆ ಜ್ಞೇಯವು ಕಾಣುತ್ತದೆ" ಎಂದು ಹೇಳುತ್ತೀಯಲ್ಲಾ, ನೀನು ಯಾರು? ಜ್ಞಾನವೋ ಜ್ಞೇಯವೋ? ನೀನೂ ಜ್ಞೇಯವೇ ಆಗಿದ್ದರೆ ನಿನಗೆ ಜ್ಞೇಯವು ಕಾಣಿಸಕೂಡದಿತ್ತು. ನೀನು ಕೇವಲ ಜ್ಞಾನವೇ ಆಗಿದ್ದರೆ ಆಗಲೂ ಜ್ಞೇಯವು ಕಾಣಿಸುವುದಿಲ್ಲ. ನಿನಗೆ ಜ್ಞೇಯವು ಕಾಣಿಸುತ್ತಿರುವುದರಿಂದ ನೀನು — ಜ್ಞಾನಜ್ಞೇಯಗಳ ಅಧ್ಯಾಸದಿಂದ ಆಗಿರುವ ಜ್ಞಾತೃವಾಗಿರುತ್ತೀಯೆ. ನಿನ್ನ ಜ್ಞಾನಸ್ವರೂಪದಲ್ಲಿ ಅಧ್ಯಾಸವಾಗಿರುವ ಜ್ಞೇಯಾಂಶವು ಮಿಥ್ಯೆ. ಇದು ಇಲ್ಲವೇ ಇಲ್ಲವೆಂದು ಅವಸ್ಥಾತ್ರಯವಿಚಾರದಿಂದಲೂ ಶ್ರುತಿ ಯುಕ್ತಿ ಅನುಭವಗಳಿಂದಲೂ ತಿಳಿದರೆ ಆಗ ನೀನು ಜ್ಞಾತೃತ್ವವಿಲ್ಲದ ಶುದ್ಧಜ್ಞಾನಸ್ವರೂಪದವನಾಗಿರುವುದು, ಶುದ್ಧಜ್ಞಾನದಲ್ಲಿ ಭ್ರಾಂತಿಯಿಂದ ಜ್ಞೇಯವು ಅಧ್ಯಾಸವಾಗಿರುವುದೆನ್ನುವುದು, ಆ ದೃಷ್ಟಿಯಿಂದ ನೋಡಿದಾಗ ಮಾತ್ರವೇ ಜ್ಞೇಯವಾದ ದೇಹಾದಿಪ್ರಪಂಚವು ಕಾಣುವುದೆಂಬುದು ಗೊತ್ತಾಗುತ್ತದೆ. ಆದ್ದರಿಂದ ಶುದ್ಧಜ್ಞಾನವೇ ಸತ್ಯ.

ಜ್ಞಾತೃವು ನಾನು ಎಂದು ನೀನು ತಪ್ಪಾಗಿ ತಿಳಿದಿದ್ದರೂ ಆಗಲೂ ನೀನು ಶುದ್ಧಜ್ಞಾನಜ್ಯೋತಿಯೇ ಆಗಿರುವೆ. ಅನಾತ್ಮವಾದ ಜ್ಞೇಯವು ಸ್ವಾಭಾವಿಕವಾಗಿ ನಿನ್ನಲ್ಲಿರುವುದಿಲ್ಲ. ಮಿಥ್ಯಾಭಿಮಾನದಿಂದ ಜ್ಞೇಯವು ಸತ್ಯವೆಂದು ತಿಳಿದು ಬಲಿಷ್ಠವಾಗಿ ನಿನ್ನ ಶುದ್ಧಜ್ಞಾನಸ್ವರೂಪವನ್ನೇ ಮರೆಮಾಡಿಕೊಂಡಿರುವೆ. ಅವಸ್ಥಾತ್ರಯ —

ವಿಚಾರದಿಂದ ಸುಷುಪ್ತಿಯಲ್ಲಿ ಯಾವ ಜ್ಞೇಯವೂ ಇಲ್ಲದೇ - ನಿನಗೆ
ಜ್ಞಾತೃತ್ವವೂ ಇಲ್ಲದೇ ಶುದ್ಧ ಜ್ಞಾನಸ್ವರೂಪನಾಗಿಯೇ ಇರುವುದನ್ನು
ನೀನೇ ಆಲೋಚಿಸಿ ಅನುಭವದಿಂದ ತಿಳಿದುಕೊಂಡು ನೋಡಬಹುದು. ಹೀಗೆ
ಆ ನಿನ್ನ ನಿಜಸ್ವರೂಪದ ದೃಷ್ಟಿಯಿಂದ ನೋಡಿದರೆ ಜ್ಞೇಯವು ಇಲ್ಲವೇ ಇಲ್ಲವೆಂದು
ಮಾಯಾ ಅಥವಾ ಅಜ್ಞಾನದೃಷ್ಟಿಯಿಂದ ನೋಡುವವರಿಗೆ ಜ್ಞಾನವೇ ಜ್ಞೇ-
ಯದಂತೆ ತೋರುವುದೆಂಬುದು ಅನುಭವಕ್ಕೆ ಬರುವುದು.

ಯಾರಿಗೆ ಸಮಗ್ರತೆಯಿಲ್ಲದಿರುವ ಹಗ್ಗವು ಹಗ್ಗವೆಂದು ತಿಳಿಯದೋ
ಅದು ಹಾವೆಂದು ತಪ್ಪುತಿಳುವಳಿಕೆಯುಂಟಾದ ಅವನಿಗೆ ಹಗ್ಗವು ಹಾವಿ-
ನಂತೆ ಕಾಣುವುದು. ತುಂಬಾ ಕತ್ತಲಾದರೆ ಏನೂ ಕಾಣಿಸುವುದೇ ಇಲ್ಲ.
ಸಮಗ್ರತೆಯಿಲ್ಲದವನ; ಅದು ಹಾವಿನಾಕಾರವೇ ಕಾಣಿಸುವುದು. ಎಲ್ಲಿಯವರೆಗೆ
ಅದು ಹಗ್ಗ ಎಂಬ ಜ್ಞಾನವಾಗುವುದಿಲ್ಲವೋ ಅಲ್ಲಿಯವರೆಗೆ ಅವನಿಗೆ ಅದು
ಹಾವಾಗಿಯೇ ತೋರುವುದು. (ತನ್ನಲ್ಲಿ ಭಯವೂ ತಪ್ಪಿದ್ದಲ್ಲ) ಅದು ಹಗ್ಗ
ಎಂದು ತಿಳಿದಾಗಲೇ ಹಾವೆಂದು ತಿಳಿದಿದ್ದ ಅಜ್ಞಾನವು ತೊಲಗುವುದು.
ಹೀಗೆ ನಮ್ಮ ಆತ್ಮವನ್ನು ವಿಚಾರವೆಂಬ ಜ್ಞಾನಪ್ರಕಾಶದಿಂದ ಸಾಕ್ಷಿಚೈತನ್ಯ-
ಸ್ವರೂಪವಾಗಿರುವುದನ್ನು ಕಂಡುಕೊಳ್ಳಬೇಕು. ಹಾಗಿಲ್ಲದೆ ನಮ್ಮ ಅಜ್ಞಾನದಿಂದ
ದೇಹೇಂದ್ರಿಯಸಂಘಾತವೇ ನಾನೆಂದು ಸಾಮಾನ್ಯವಾಗಿ ತಿಳಿದುಕೊಂಡಿದ್ದೇವೆ. ಆದ್ದರಿಂದ
ನಮಗೆ ನಿಜಸ್ವರೂಪವಾದ ಸಾಕ್ಷಿಸ್ವರೂಪವು ಕಾಣದೇ ದೇಹೇಂದ್ರಿಯಗಳು ಕಾಣು-
ತ್ತವೆ. ನಿದ್ರೆಯಲ್ಲಿ ದೇಹೇಂದ್ರಿಯಗಳಾವುವೂ ಕಾಣಿಸುವುದಿಲ್ಲ. ಎಚ್ಚರ-
ವಾದರೆ ಪುನಃ ದೇಹೇಂದ್ರಿಯ ಪ್ರಪಂಚವೆಲ್ಲ ಕಾಣಿಸುವುದು. ಎಲ್ಲಿಯವರೆಗೆ
ದೇಹೇಂದ್ರಿಯಗಳೇ ನಾನು - ನನ್ನದು ಎಂದು ತಿಳಿದುಕೊಂಡು (ಸಾಮಾನ್ಯಜ್ಞಾನ

ಬಂದರೂ ವ್ಯಕ್ತಿ(ವಿಟ್ನೆಸ್)) ನಮ್ಮ ನಿಜವಾದ ಸಾಕ್ಷಿಸ್ವರೂಪವನ್ನು ತಿಳಿಯುವ
ಬಲ್ಲನೇ? ಇಲ್ಲಿಯವರೆಗೆ ನಾನು ಜ್ಞಾನೇಂದ್ರಿಯಗಳಿಂದ ತಿಳಿಯಲು ಆಗುವು
ದಿಲ್ಲ. ಜ್ಞಾನೇಂದ್ರಿಯಗಳು ನಾನೆಂಬ ತತ್ತ್ವದ ಹೊರತು ಇನ್ನಿಲ್ಲ ಪ್ರಮಾತೃತ್ವವ
ಸಿದ್ಧಿಸುವುದಿಲ್ಲ. ತಾನು ಪ್ರಮಾತೃವಾಗುವುದಿಲ್ಲ. ಪ್ರಮಾತೃಸಿದ್ಧಿಯಿಲ್ಲದೆ
ಯಾವ ಪ್ರಮಾಣಪ್ರಮೇಯವ್ಯವಹಾರವು ನಡೆಯುವುದಿಲ್ಲ. ಆದ್ದರಿಂದ
ಪ್ರಮಾತೃತ್ವವೇ ಅಧ್ಯಸ್ತವಾದ್ದರಿಂದ ಪ್ರಮಾಣಪ್ರಮೇಯಗಳು ಅವುಗಳಿಂದ
ಆಗುವ ವ್ಯವಹಾರಗಳು ಎಲ್ಲವೂ ಮಿಥ್ಯೆಯೇ. ಈ ಪ್ರಮಾತೃಪ್ರಮಾಣ
ಪ್ರಮೇಯ ವ್ಯವಹಾರವೇ ಜಾಗ್ರತ್ತನ್ನು ಬಿಟ್ಟು ಇರುವುದಿಲ್ಲ.
ನಿದ್ರೆಯಲ್ಲಿ ಪ್ರಮಾಣಪ್ರಮೇಯಗಳು ಇಲ್ಲ ಅವುಗಳ ವ್ಯವಹಾರವೂ ಇಲ್ಲ.
ಹಾಗೆ ಎಚ್ಚರದಲ್ಲಿ ಪ್ರಮಾತೃಪ್ರಮಾಣಪ್ರಮೇಯ ವ್ಯವಹಾರವಿರುವುದನ್ನು
ನಿದ್ರೆಯಲ್ಲಿ ಇಲ್ಲದಿರುವುದನ್ನು ತಿಳಿಯುವವನೇ ಸರ್ವಸಾಕ್ಷಿಯು.
ಸಾಕ್ಷಿ ಎಂದರೆ ಕಣ್ಣಿನಿಂದ ನೋಡುವವನು ಎಂದರ್ಥ. ಈ ಸಾಕ್ಷಿಯಲ್ಲಿ ಸರ್ವ
ಅವಸ್ಥೆಗಳು [illegible] ಅಧ್ಯಸ್ತವಾಗಿರುವುದರಿಂದ ಇವನನ್ನು ಸಾಕ್ಷೀ ಎಂದು
ಕರೆದಿದೆ. ಅಧ್ಯಸ್ತವಾದ ಅವಸ್ಥೆಗಳು ಸ್ವತಃ ಅಧಿಷ್ಠಾನಸಾಕ್ಷಿಗಿಂತ ಬೇರೆ
ಯಾಗಿಲ್ಲದ್ದರಿಂದ ಈ ಅವಸ್ಥೆಗಳು ಇಲ್ಲವೇ ಇಲ್ಲ. (ಕಲ್ಪಿತ-ಮಿಥ್ಯಾ). ಇಲ್ಲ ಅಸ್ತಿ
ತ್ವವಾದ ಸಾಕ್ಷಿತ್ವದ ಅಪೇಕ್ಷೆಯಿಂದ ಸರ್ವಸಾಕ್ಷಿ ಎಂದು ಉಪಚಾರದಿಂದ ಕರೆದಿದೆ.
ಸರ್ವವೂ ಅಧ್ಯಸ್ತವಾದ್ದರಿಂದ (ಸ್ವಪ್ನದಂತೆ) ಅವು ತೋರುತ್ತಿರುವಾಗಲೂ - ತೋ
ರದಿರುವಾಗಲೂ ಅವು ಇಲ್ಲವೇ ಇಲ್ಲ ಎಂದು ದೃಢವಾದ ಬಳಿಕ ಆಗ
ಸಾಕ್ಷಿ ಎಂಬ ಹೆಸರೂ ಇಲ್ಲವಾಗುವುದು. ಸಾಕ್ಷಿತ್ವವಿಲ್ಲದ ಶುದ್ಧ ಚೈತನ್ಯ
ಮಾತ್ರ ಉಳಿಯುವುದು. ಇದೇ [illegible]

ಈ ನಿಜ ಚಿತ್ರವನ್ನು ತಿಳಿಯದೇ ಇದರಲ್ಲಿ ಅವಸ್ಥೆಗಳನ್ನು ಅವಸ್ಥೆಗಳಲ್ಲಿ ಕಾಲ ದೇಶಗಳನ್ನು ಕಾಲದೇಶಗಳಲ್ಲಿ ಜೀವಾದಿಗಳನ್ನು ನಾನು ನನ್ನದು ಎಂಬು ದನ್ನು ಅಧ್ಯಾರೋಪಿಸಿಕೊಂಡು ಅನಾದಿ ನೈಸರ್ಗಿಕವಾಗಿ ವ್ಯವಹಾರಮಾಡುತ್ತಿ ರುವ ಸರ್ವಜನರುಗಳೂ ಶರಣಾಗಿದೆ. ಇದರಿಂದ ಅಧ್ಯಸ್ತವಾಗಿರುವ ದೇ ಹೇಂದ್ರಿಯಾದಿಗಳು ನಾನಲ್ಲ. ನಾನು ಅವಸ್ಥಾತ್ರಯಸಾಕ್ಷಿಯು ಎಂದು ತಿಳಿದು ಸರ್ವಜನರುಗಳೂ ಶರಣಾಗಿರುವ ಜೀವಾಧ್ಯಾಸವನ್ನು ಬಿಟ್ಟುಕೊಂಡಿ ರಬೇಕು ತಿಳಿಸುವ.

ವೈಜ್ಞಾನಿಕ ದೃಷ್ಟಿ. ವ್ಯವಹಾರ ದೃಷ್ಟಿ. ಜೀವ ದೃಷ್ಟಿ. ಪ್ರಾಣ ದೃಷ್ಟಿ ಎಲ್ಲವೂ ಒಂದೇ. ಈ ದೃಷ್ಟಿಯಿಂದ ನೋಡಿದಾಗ ಜೀವಾದಿಪ್ರಪಂಚ ಪ್ರಾಣಪ್ರಪಂಚವೂ ವ್ಯವಹಾರಕ್ಕೆ ಸತ್ಯವಾಗಿರುವಂತೆ ತೋರು ದಂತೆ ಕಾಣುವುದು.

ಅವಸ್ಥಾತ್ರಯಸಾಕ್ಷಿ ದೃಷ್ಟಿ ಪರಮಾರ್ಥ ದೃಷ್ಟಿ ಅದ್ವೈತ ದೃಷ್ಟಿ ಶುದ್ಧ ದೃಷ್ಟಿ ಇವೆಲ್ಲ ಒಂದೇ. ಈ ದೃಷ್ಟಿಯಿಂದ ನೋಡಿದರೆ ಸತ್ಯ ಜ್ಞಾನಸ್ವರೂಪದ ಬಿನ್ನ ಆತ್ಮನ ಅನ್ಯವಸ್ತುವಿಲ್ಲ ಎಂದು ತಿಳಿಯುವುದು ಎಲ್ಲವೂ ತಾನೇ, ಇದಲ್ಲ, ಅವಿಭಾಜ್ಯವಾದುದು ಎಂದು ಗೊತ್ತಾಗುವುದು.

ಅಲೆಗಳಲ್ಲಿ ಬೆರತು ನೀರಿನಲ್ಲಿ ಬಂದಾಗಾಗ ಹೇಗೆ ಅಲೆ ಎಂಬ
ನಾಮರೂಪವು ಮತ್ತು ಅಲೆಗಳು ಎಂಬ ಸಂಖ್ಯೆಯೂ ಇರುವುದಿಲ್ಲವೋ
ಹಾಗೆಯೇ ಬಿಡಿಬಿಡಿಯಾಗಿ ವಿಂಗಡಿಸಿಕೊಂಡು ಕಾಣುತ್ತಿರುವ ನೀನು
ನಾನು ಮತ್ತು ಬಿಡಿಬಿಡಿ ಪ್ರಾಣಿಗಳೆಲ್ಲಾ ಚೈತನ್ಯದಲ್ಲಿ ಬೆರತು
ಬಂದಾಗಾಗ ನಿನ್ನಲ್ಲಿ ನನ್ನಲ್ಲಿ ಮತ್ತು ಬಿಡಿಬಿಡಿ ಪ್ರಾಣಿಗಳಲ್ಲಿ ದೇಹ
ದೇಹಿ ಎಂಬ ನಾಮರೂಪಗಳು ಹಾಗೂ ಪ್ರಾಣಿಗಳು ಎಂಬ ಸಂಖ್ಯೆಯೂ
ಇರುವುದಿಲ್ಲ. ಹೀಗ ಯಾರು ಏನನ್ನು ಏತರಿಂದ ಅರಿಯುವುದಕ್ಕಾಗಲೀ
ನಾನು ಎನ್ನುವುದಕ್ಕಾಗಲೀ ನನ್ನದು ಎನ್ನುವುದಕ್ಕಾಗಲೀ ಅವಕಾಶವೆ
ಲ್ಲಿದೆ? ಇಂಥಾ ಅಖಂಡ ಚೈತನ್ಯಸ್ವರೂಪನಾಗಿ ನಾನು ಸುಷುಪ್ತಿ
ಅವಸ್ಥೆಯಲ್ಲಿರುತ್ತೇನೆ. ಈ ಸ್ವರೂಪವೇ ಜಾಗ್ರದವಸ್ಥೆ ಎಚ್ಚ
ರಿಕೆಯಲ್ಲಿ ನಾನು - ನೀನು - ಅವನು - ದೇಹ. ದೇಹಿ ಎಂಬ ರೂಪ
ದಲ್ಲಿರುವಂತೆ ತೋರುತ್ತದೆಯೇ ಹೊರತು ಈ ನಾಮವಸ್ತುವನ್ನು ಬಿಟ್ಟು
ಕೊಂಡಿತ್ತಾದರೂ ಅನ್ಯವಸ್ತುವು ಪೃಥಕ್ಕಾಗಿ (ಸ್ವತಂತ್ರವಾಗಿ) ಇರುವುದಿಲ್ಲ
ನನ್ನ ಸ್ವರೂಪವಾದ ಆತ್ಮಜ್ಯೋತಿಯು ತೆರೆಯಲ್ಲಿರುವಂತಹದ್ದಲ್ಲ.
ಏಕೆಂದರೆ ಅದು ಸ್ವಯಂಜ್ಯೋತಿಯು. ಅದಕ್ಕೆ ಇನ್ನೊಂದರಿಂದ ಬೆಳಕು ಬೇ
ಕಾಗಿಲ್ಲ. ಅದೇ ಎಲ್ಲ ವಸ್ತುಗಳ ಇರುವು ಅರಿವು ತಿಳಿಸುತ್ತದೆ. ಇಂಥಾ
ಸ್ವತಸ್ಸಿದ್ಧವಾಗಿರುವ ಸ್ವಯಂಜ್ಯೋತಿಯು ಜ್ಞಾನವಲ್ಲದೇ ಅದನ್ನು ದೇಹಗ-
ಳಾಗಲೀ, ಇಂದ್ರಿಯಗಳಾಗಲೀ ನಾನೆಂದು ಜನರು ತಪ್ಪಾಗಿ ತಿಳಿದುಕೊಂಡಿರುತ್ತಾ
ರೆ. ತಪ್ಪು ತಿಳುವಳಿಕೆಯೇ ಅಜ್ಞಾನವು ಅಧ್ಯಾಸ ಎನ್ನುತ್ತಾರೆ. ಸಂಸ್ಕೃತ
ದಲ್ಲಿ ... ನಾನಾಪ್ರಕಾರವಾಗಿದೆ. ಜನರ ಸ್ವಭಾವಿಕ

ವಾದ ಈ ಅಜ್ಞಾನವನ್ನು ಕಳೆದು ಸ್ವಸ್ವರೂಪ ಜ್ಞಾನವನ್ನುಂಟು ಮಾಡುವುದಕ್ಕೆ ಶ್ರುತಿಯು
ಅದ್ವೈತತತ್ವದಲ್ಲಿ ನಾನಾ ನಾಮರೂಪಗಳನ್ನು ಉತ್ಪತ್ತಿ ಮಾಡಿ, ಅದ್ವೈತ
ಸರ್ವರೂಪಿಯಾಗಿದ್ದಾನೆ - ಸೃಷ್ಟಿಯನ್ನು - ಅದ್ವೈತ ಸರ್ವಕ್ಕೂ ಆಧಾರ
- ಎಂದು ಸ್ಥಿತಿಯನ್ನು ಹೇಳಿ - ಇರುವುದು ಅದ್ವೈತ ಒಂದನ್ನು ಬಿಟ್ಟು ಬೇರೆ
ವಸ್ತು ಇಲ್ಲವೇ ಇಲ್ಲ ಎಂದು ಲಯವನ್ನು ಉಪದೇಶ ಮಾಡಿ ಬಿಟ್ಟಿತು -
ಅದ್ವೈತತತ್ವವೇ ಸರ್ವೋಲ್ಲರ - ಇದೇ ಜಗತ್ತಿನ ಸ್ವರೂಪವೆಂದು ಉಪದೇಶ
ಪ್ರತಿಪಾದಿಸುತ್ತದೆ. ಸರ್ವಜ್ಞ - ಎಂದರೆ ಎಲ್ಲವೂ ತಾನೇ ಆಗಿ ಎಲ್ಲವನ್ನೂ
ತಿಳಿಯುವವನು. 6

ಆ ಸರ್ವಜ್ಞನು ಯಾರು? ಎಲ್ಲಿದ್ದಾನೆ? ಇದು ನಾನೇ —

ಮನಸ್ಸನ್ನು ಮುಟ್ಟಿ ವಸ್ತುಗಳ ತಿಳಿದರೆ ಒಂದಾದ ಹೊರಗೆ
ಒಳಗೆ ಮುಂತಾದವೆಲ್ಲ ತಿಳಿಯುವಂತೆ - ಒಳಗಿನ ಸಾಕ್ಷಿಯನ್ನು ತಿಳಿದು
ಸರ್ವ ಭೂತ - ಭೌತಿಕ ವಸ್ತುಗಳನ್ನು ತಿಳಿದಂತೆಯೇ. ಆ ಸಾಕ್ಷಿಯು ನಾನೇ.
ಆದ್ದರಿಂದ ನಾನೇ ಸರ್ವಜ್ಞ. ಎದುರಿಗೆ ತೋರುವ ಸರ್ವವೂ ನನ್ನ ಮಾಯೆಯಿಂದ
ಎಲ್ಲ ಬರುವುದು ಬಂದ ಹೋಗುತ್ತದೆ. ಮಿಥ್ಯೆ - ಅನಾತ್ಮ ಸ್ವರೂಪವದೆ. ಆದ್ದರಿಂದ
ನನಗೆ ಸಾಕ್ಷಿತ್ವವೂ ಇಲ್ಲ. ಇರುವುದು ನಾನೇ - ಚಿದಾನಂದರೂಪವೇ
ನನ್ನ ನಿಜರೂಪ. ಮಿಕ್ಕಿದ್ದರಿಂದ ಹೇಗೆ ವಿಚಾರಿಸೋಣ?

ಸಾಕ್ಷಿತ್ವವಿಲ್ಲದ ಬಳಿಕ ಮಾಯೆಯಿಂದ ಎಲ್ಲವನ್ನು ತಿಳಿಯುತ್ತೇನೆ
ಇದು ಹೇಗಾದೀತು? ಮಾಯೆಯಿಂದ ಎಲ್ಲವನ್ನು ತಿಳಿಯುತ್ತೇನೆ. ನಿಜ್ರಿಯನಾಗಿ
ತಿಳಿಯುವ ಕ್ರಿಯೆಯಿಲ್ಲದವನಾಗಿಯೂ ಇರುವ ಅದ್ವೈತ ಜ್ಯೋತಿಯೇ ನಾನು - ನಾನೇ
ಇದೇ ಪ್ರಪಂಚದ ಸ್ವರೂಪವು.

ಮನಸ್ಸು ಕತ್ತಲೆಯಲ್ಲಿ ಪಿಶಾಚವನ್ನು ಕಲ್ಪಿಸಿಕೊಂಡು ಭಯ
ಪಡುವಂತೆ ಅವಿವೇಕಿಗಳಾದ ಜನರು ಆತ್ಮಚೈತನ್ಯದಲ್ಲಿ ದೃಶ್ಯಪ್ರ
ಪಂಚಭಾಸವನ್ನು ನೋಡಿ ಎಲ್ಲಾ ಮಾಯಾವಿಷಯ ಎಂದು ಭಯಪಡುತ್ತಾರೆ.
ಈ ದೃಶ್ಯಪ್ರಪಂಚವು ಬರಿ ಭ್ರಮೆ. ಮೊದಲು ಕಣ್ಣಿಗೆ
ಒಳ್ಳೆ ಬೆಳೆಯುವುದಿಲ್ಲ. ಇದು ದೇಹವೇ ನಾನೆಂಬ ಭ್ರಾಂತಿಯಿಂದ ಎ
ತ್ತುತ್ತಾ ಕಾಣುತ್ತದೆ. ಈ ಭ್ರಾಂತಿಜ್ಞಾನದಿಂದ ದೃಶ್ಯಕ್ಕೆ ಇರುವಿಕೆಯೇ
ಹೊರತು ದೃಶ್ಯವು ಸ್ವಸ್ವರೂಪವಂತೆ ಎಂದಿಗೂ ಸತ್ಯವಲ್ಲ.

ಇಂತಹ ದೃಶ್ಯಪ್ರಪಂಚಗಳು ತೋರುವ ಎಲ್ಲ ಸ್ವಪ್ನಗಳನ್ನು
ನೋಡಿ ಅನೇಕರಾದ ಸಾಮಾನ್ಯರು ಇಲ್ಲಿಗೆ ಬರುವ ಬೆಳಕಿನ
ಸಾಕ್ಷಿಯೇ ಆತ್ಮಚೈತನ್ಯವು. ಇಂಥಾ ಸ್ವರೂಪವೇ ನಾನು -- ದೇಹೇಂ
ದ್ರಿಯಾದಿ ಸಂಘಾತವಲ್ಲ. ಎಂದು ತಿಳಿದವನಿಗೆ ಭಯವೆಲ್ಲಿಯದು?
ದುಃಖವೆಲ್ಲಿಯದು? ದುಃಖ ಭಯವು ದೃಶ್ಯಪ್ರಪಂಚದಲ್ಲಿ!
ದ್ವೈತವಿಲ್ಲದ ಚೈತನ್ಯದಲ್ಲಿ? ಎಂತಹುದೂ ಇಲ್ಲ. ಇದನ್ನು
ಸ್ವಾನುಭವಕ್ಕೆ ತಂದುಕೊಳ್ಳದೆ ತಿಳಿಯದೇ ಶಾಸ್ತ್ರಸ್ತವನ್ನು
ಓದಿಕೊಂಡು ನಾನು ಇದು - ಇದು ನಾನು ಎಂದು ಅರಿ
ತನ್ನಾಗಿ ತಿಳಿದುಕೊಂಡವರೇ ಅವರೇ ಭಯ ದುಃಖಿಗಳು.
ವಿಚಾರದಿಂದ ದೃಷ್ಟಿಯನ್ನು ಬಿಡಿಸಿ ಮಾಯಾ - ಪ್ರಪಂಚ ನಾಶನಾಗಿ
ಕೇವಲ ಸಚ್ಚಿದಾನಂದ ಸ್ವರೂಪನೆಂದು ಅನುಭವಿಸುವುದೇ
ಎಂಬುದೇ ನಾಬಿ ಭ್ರಾಂತಿ ಕಾರಣ ।

❀ ಕನ್ನಡಿಯು ಕೋಟ್ಯಾಂತರ ಮುಖಗಳನ್ನು ಕೋಟ್ಯಾಂತರಂತೆ ತೋರುವುದು.

ಕಣ್ಣಿಗೆ ಕಣ್ಣು ಮುಖಕ್ಕೆ ಮುಖವು ಕಾಣಿಸುವುದಿಲ್ಲ. ಕನ್ನಡಿಯನ್ನು ನೋಡಿದರೆ ಮುಖವು ಕಣ್ಣು ಕಾಣಿಸುವುದು. ಕನ್ನಡಿಯನ್ನು ಕಾಣುವ ಕಣ್ಣು ಮುಖಗಳ ಬಿಂಬ ತೋರಿದೆ. ಈ ಅಭ್ಯಾಸವನ್ನು ಕನ್ನಡಿ ಇದ್ದರೆ ತೋರುವುದು. ಇಲ್ಲದಿದ್ದರೆ ಇಲ್ಲ. ನಿಜವದ ಕಣ್ಣು ಮುಖಗಳು ಮಾತ್ರ ಇದ್ದೇ ಇರುವುದು - ಪ್ರತ್ಯಕ್ಷವಾಗಿರು - ಹಾಗೆಯೇ ನಾನು ತನ್ನನ್ನು ತಿಳಿಯುವುದಕ್ಕಾಗುವುದಿಲ್ಲ. ತಿಳಿಯುವವನೇ ನಾನು. ಎಲ್ಲವನ್ನು ತಿಳಿಯುವ ತನ್ನನ್ನು ಇನ್ನೊಬ್ಬ ತಿಳಿಯುವನಾಗಲೀ ನಿಜವಾಗಿ ತಿಳಿಯಲ್ಪಡುವ ವಸ್ತುವಾಗಲೀ ಇರಲು ಸಾಧ್ಯ ಎಂಬ ಅನುಭವ ಯಾರಿಗೂ ಇಲ್ಲ. ಆದರೆ ಕನ್ನಡಿಯಂತಿರುವ ಬುದ್ಧಿಯಿಂದ ಎಂದರೆ ನಾಮರೂಪಗಳೆಂಬ ಉಪಾಧಿಯಿಂದ ನಾನು ಎಂಬ ಶುದ್ಧಾತ್ಮನು ತನ್ನನ್ನು ಜೀವನೆಂದು - ಮನುಷ್ಯನೆಂದು - ದೇವನೆಂದು - ಪಶುವೆಂದು ಎಂದು ತಿಳಿಯುತ್ತಾನೆ. ಎಂದರೆ ನಾಮರೂಪಗಳನ್ನು ತೋರಿಕೆಯಿಂದ ಪ್ರತಿಬಿಂಬದಂತಹ ಸ್ವರೂಪವನ್ನು ತಿಳಿಯುವುದಕ್ಕಾಗುತ್ತದೆ. ತಿಳಿಯುತ್ತಾನೆ. ಆದರೆ ಹೀಗೆ ನಾಮರೂಪ ಉಪಾಧಿಗಳಿಂದ ತೋರಿಕೆಯಿಂದ ಸ್ವರೂಪವು ನಿಜವಲ್ಲ. ಈ ತೋರಿಕೆಯು ಮಿಥ್ಯೆ; ಜಾಗ್ರತ್ ಸ್ವಪ್ನಗಳೆಂಬ ಅವಸ್ಥೆಗಳಲ್ಲಿ ಕಲ್ಪಿತವಾದ ಈ ಅವಸ್ಥೆಗಳು ಮಾತ್ರ ನಿದ್ರೆಯಲ್ಲಿ ಅಸ್ತನಲ್ಲಿ ತೋರಿಕೆಯಾಗುತ್ತವೆ. ಅವಸ್ಥೆಗಳು ಇಲ್ಲದಾಗ ಈ ಮಿಥ್ಯೆಯು ಇರುವುದಿಲ್ಲ. ಸಾಕ್ಷಿಯಾದ ಆತ್ಮನು ಮಾತ್ರ ಸದಾ ಇದ್ದೇ ಇರುತ್ತಾನೆ. ಈ ಸಾಕ್ಷಿಗಿಂತ ಬೇರೆ ಮಿಥ್ಯೆಯು ಇಲ್ಲವೇ ಇಲ್ಲ. ಎಚ್ಚರ-ಸ್ವಪ್ನ ಅವಸ್ಥೆಗಳಲ್ಲಿ

ವ್ಯವಹಾರಗಳನ್ನೆಲ್ಲ ಹೊತ್ತಿದ್ದ ಅಭಿಮಾನವು ಉದ್ರಿಕ್ತವಾದ್ದರಿಂದಲೇ
ಸಾಕ್ಷಿಯಾದ ಆತ್ಮನು ತಿರೋಧಾನವಾಗಿ (ಮರೆತುಹೋಗಿ) ಮಿಥ್ಯಾತ್ಮನೇ
ನಿಜವಾದ ಆತ್ಮನೆಂದು ತಿಳಿಯಲ್ಪಡುತ್ತಾನೆ. ಇದು ತಪ್ಪು ತಿಳು-
ವಳಿಕೆ ತಾನೇ. ಇದಕ್ಕೆ ನಿಶ್ಚಯಾತ್ಮಕವಾದುದು ಈ ಬುದ್ಧಿಯು. ಈ ಬುದ್ಧಿ
ಇರುವವರೆಗೆ ನಿಜವಾದ ಆತ್ಮನ ಅನುಭವವು (ಸಾಕ್ಷಾತ್ಕಾರ)
ಆಗುವುದೇ ಇಲ್ಲ. ತನ್ನ [illegible]ಸ್ವರೂಪವನ್ನರಿಯಬೇಕಾದರೆ - ಎ-
ಚ್ಚರದ ಅವಸ್ಥೆಗಿಂತಲೂ ನಿದ್ರಾವಸ್ಥೆಯನ್ನು ಪರಿಶೀಲಿಸಬೇಕು.

ನಿದ್ರೆಯಲ್ಲಿ ನಾನು [illegible]ಯಾಗಿರುವುದಿಲ್ಲ. ಆಗ ಆತ್ಮನು
ಏನನ್ನು ತಿಳಿಯುವುದಿಲ್ಲ. ತಿಳಿಯುವ ಕ್ರಿಯೆಯೂ ಇರುವುದಿಲ್ಲ.
ಕ್ರಿಯಾಕಾರಕಫಲವೆಂದೂ ತೋರದ ಸ್ಥಿತಿಯಲ್ಲಿ ಇರುವುದೇನು?
ಇದನ್ನು ನೇರವಾಗಿ ಹೇಳುವುದಕ್ಕೆ ಆಗುವುದಿಲ್ಲ. ಆಗ ಇಲ್ಲ
[illegible] ಎಚ್ಚರದಲ್ಲಿ ಎಚ್ಚರದ ನಾಮರೂಪಗಳನ್ನು ಕಲ್ಪಿಸದೆ
ಅದು ಇಂಥದು ಎಂದು
ಹೇಳುವುದಕ್ಕಾಗುವುದಿಲ್ಲ. ಆಗ ದವಸ್ಥೆಯಲ್ಲಿ ನಾನು ಎಂದೂ, ತಿಳಿ-
ವಿಚಾರದಿಂದ ತಿಳಿದರೆ
ಯುವವನು ಎಂದೂ, ಸರ್ವಸಾಕ್ಷಿ ಎಂದೂ ಪ್ರಸಿದ್ಧವಾಗಿ ಅನು-
ಭವಸ್ವರೂಪವಾಗಿರುವುದರ ತಿರುಳೇ ನಿದ್ರೆಯಲ್ಲಿ ಇರುವ
ಸದ್ರೂಪ - ಚಿದ್ರೂಪ - ಆನಂದರೂಪ - ಆತ್ಮ ಎಂದು ನಿಶ್ಚಯಿಸಬೇಕು.

ನಿದ್ರೆಯಲ್ಲಿ ನಾಮರೂಪಗಳಿಲ್ಲ. ಅವುಗಳಿಗೆ [illegible] ಕರ್ತೃ-
ಅಹಂಕಾರದ ಮಿಥ್ಯಾತ್ಮನೂ ಇಲ್ಲ. ನಿಜವಾದ ಪರಮಾತ್ಮನು -
ಮಾತ್ರವೇ ಹೊಳೆಯುತ್ತದೆ - ಬೆಳಗುತ್ತದೆ (ನಗತ: ನಾಗತ:) [illegible] ಇರುವುದೇ
ಅವಸ್ಥೆಗಳು ಬರುತ್ತವೆ ಹೋಗುತ್ತವೆ. ಆದರೂ ಕಾಲತ್ರಯ [illegible]
ಬರುವವನು ಹೋಗುವವನು ಆದ ಆತ್ಮನು ಪರಮನಲ್ಲ. ಮಿಥ್ಯಾತ್ಮನೇ.

ನಾನು-ಎತ್ತರವಾಗಿರುವವನು, ನಾನು ಸ್ಥೂಲಕಾಯನು, ನಾನು ಗಿಡ್ಡ
ನವನು, ನಾನು ಕಿವಿ-ಕೇಳುತ್ತಿ, ನಾನು ಸುಖಿ ಎಂದು ಹೇಳು[illegible]
ತ್ತ ನಮ್ಮ ವ್ಯವಹಾರ ನಡೆಯುವಾಗ ನಾನು ಎಂಬ ಶಬ್ದವು - ಎತ್ತರದೊಡ
ನೆಯೂ ಒಂದು [illegible] ನಾಮರೂಪಗಳೊಡನೆಯೂ,
ಕಿವಿ ಕೇಳುತ್ತಿ ಎಂದು ಎಲ್ಲಾ ದಲ್ಲು ಎಂಬಂತೆ ಇರು ಹೇಳಿಕೊಳ್ಳುತ್ತಾನೆ [illegible] ದೇಹದ
ಮಾಡುತ್ತಾನೆ. ಹೇಳಿಕೊಳ್ಳುವುದುಂಟು. ಆದರೆ ನಿಜವಾದ ನಾನು
ಆತ್ಮನು ಉಪಾಧಿಗಳ ಸಾಕ್ಷಿಯು ನಾಮರೂಪ ಉಪಾಧಿರಹಿತನು ಇಷ್ಟೇ ಇದು ಸಹ. ಈ ನಾನು ಉಪಾಧಿಗಳಲ್ಲಿ ತೋರಿ
ಕೊಳ್ಳುವ ಆತ್ಮನು. ಇಷ್ಟು ಹೊರತು ಉಪಾಧಿಗಳಾದ ದೇಹೇಂದ್ರಿಯಗ
ಳಲ್ಲಿ ತೋರಿಕೊಳ್ಳುವ ನಾನು - ನಿಜವಾದ ನನಗಿಂತ ಪ್ರತ್ಯೇಕವಾಗಿ
ಸ್ವತಂತ್ರವಾಗಿ ಇರುವುದಿಲ್ಲ. ಆದ್ದರಿಂದ ವಿಚಾರ ಮಾಡಿದರೆ ದೇಹಯು
ನಾನು ನಾನು ಎಂದುಕೊಳ್ಳುವವನ ಆತ್ಮನ ನಿಜಸ್ವರೂಪವು ಉಪನಿಷತ್
ಪ್ರಕಾರ ಸಾಕ್ಷಿಯೇ ಎಂದು ಗೊತ್ತಾಗುವುದು. ಸಾಕ್ಷಿ ಎಂಬ ಶಬ್ದ
ಸಾಕ್ಷಾತ್ ದ್ರಷ್ಟಾ ಎಂದರ್ಥ, ಸಾಕ್ಷಿಯೆಲ್ಲ [illegible]. ಆದ್ದರಿಂದ
ಸಾಕ್ಷಿತ್ವವು ಎಲ್ಲರ ಕೇವಲಜ್ಞಾನಸ್ವರೂಪವೇ ಆತ್ಮ.

ಒಬ್ಬನು ಬಂಡಿಯಲ್ಲಿ ಕುಳಿತು ಪ್ರಯಾಣ ಮಾಡುತ್ತಿದ್ದಾನೆ.
ಅಲ್ಲಿ ಗಮನಕ್ರಿಯೆಯು ಬಂಡಿ ಮತ್ತು ಕುದುರೆಯಲ್ಲಿರುತ್ತದೆ. ಮನ
ಷ್ಯನು ಸುಮ್ಮನೆ ಕುಳಿತಿರುತ್ತಾನೆ - ನಿಷ್ಕ್ರಿಯನು. ಬಂಡಿಯು ಮುಟ್ಟು
ವ ತನಕ ಓಡಿ ಕುದುರೆಯು ನಿಲ್ಲುತ್ತಲೆ ಗಾಡಿಯೂ ನಿಲ್ಲುತ್ತದೆ. ಮನ
ಷ್ಯನು ಕುಳಿತೇ ಇರುತ್ತಾನೆ. ಆದರೆ ಜನರು ಪ್ರಯಾಣ ಮಧ್ಯದಲ್ಲಿ ಆ ಮನುಷ್ಯ
ನನ್ನು ಕುರಿತು "ನೀವು ಎಲ್ಲಿಗೆ ಹೋಗುತ್ತೀರಿ" ಎಂದು ಕೇಳುವರು

ಉದ್ಯುಕ್ತನಾಗಿ ಕುಳಿತ ಮನುಷ್ಯನು ಇಂತಹವನಿಗೆ ಹೊರಗುತ್ತಿರುವ
ಹೊರಗಿನವನು — ಹೀಗೆ ಆತನ ಕರ್ತೃತ್ವವನ್ನು ಕ್ರಿಯೆಯನ್ನು ಆರೋಪಿಸಿಕೊಳ್ಳು
ವನು. ಗಾಢನಿಂತ ಮಲಗಿ ಇವನು ಏನೂ ಕೆಲಸ ಮಾಡುವದಿಲ್ಲ ಇಲ್ಲೇ ಇರುತ್ತಾನೆ
ಎಂದು ನಿಷ್ಕ್ರಿಯತ್ವವನ್ನು ಆರೋಪಿಸುತ್ತಾನೆ. ಆದರೆ ಯಥಾರ್ಥವಾಗಿ
ಕ್ರಿಯೆ ನಿಷ್ಕ್ರಿಯೆಗಳು ಬಂಡಿ ಮತ್ತು ಕುದುರೆಗಳದ್ದು. ಮನುಷ್ಯನದಲ್ಲ.
ಹಾಗೆಯೇ ಎಚ್ಚರ ಸ್ವಪ್ನಗಳಲ್ಲಿ ದೇಹೇಂದ್ರಿಯಸಂಘಾತದಲ್ಲಿ ವ್ಯಾಪಾ-
(ರ ನಡೆಯುತ್ತಿರುವುದ)
ವಾದ ಪರಮಾತ್ಮತತ್ವವು ಬಂದಿಯಲ್ಲ ಪುರುಷನಂತೆ ಕಾಣಿಸುವೇ ಆಗಿ
ರುತ್ತದೆ. ದೇಹೇಂದ್ರಿಯಗಳು ಬಾಹ್ಯವಾಗಿ ಏನಾದರೊಂದು ಕೆಲಸವನ್ನು
ಮಾಡುತ್ತಲೇ ಇರುವುವು. ಆಗ ಅಜ್ಞನು ನಾನೇ ಮಾಡುತ್ತೇನೆ - ಹೋ
ಯುತ್ತೇನೆ ಎಂದು ಮುಂತಾಗಿ ದೇಹೇಂದ್ರಿಯ ಕ್ರಿಯೆಗಳನ್ನು ತನ್ನಲ್ಲಿ
ಆರೋಪಿಸಿಕೊಳ್ಳುತ್ತಾನೆ — ಇದೇ ಅವಿದ್ಯೆ. ಏಕೆಂದರೆ ಆ ದೇಹೇಂದ್ರಿ
ಯಗಳ ಕ್ರಿಯೆಗಳು ಎಚ್ಚರ ಸ್ವಪ್ನಗಳಲ್ಲಿ ಮಾತ್ರವೇ ನಡೆಸುವ
ಗಳಂತೆ ತೋರುತ್ತವೆ. ಅವೆಲ್ಲ ನಿದ್ರೆಯಲ್ಲಿ ತನ್ನ ಆತ್ಮಸ್ವರೂಪ
ದಲ್ಲಿ ಅಡಗಿಹೋಗುವುವು. ಆಗ ಕರ್ತೃತ್ವವನ್ನು ಕುರಿತು
ಈಗ ಏನನ್ನು ಮಾಡುತ್ತಿದ್ದೀರಿ ಎಂದು ಕೇಳಿದರೆ - ಉತ್ತರ ಬರು
ವದೇನು? ಇಲ್ಲ. ಇದು ಏಕೆ? ನಿದ್ರೆಯಲ್ಲಿ ದೇಹೇಂದ್ರಿಯಗಳೆಲ್ಲ
ಸ್ವತ್ವವನ್ನು ಬಿಟ್ಟು ಒಂದಾಗಿರುವುವು. ಅಲ್ಲಿ ಏನೊಂದೂ ಕರ್ತೃವೇ
ಇಲ್ಲ. ಅದ್ದರಿಂದ ಕ್ರಿಯೆಯೂ ಇಲ್ಲ. ಈ ಯಥಾರ್ಥಜ್ಞಾನವನ್ನು
ತಿಳಿದುಕೊಂಡರೆ ಸಾಮಾನ್ಯವಾಗಿ ನಿದ್ರೆಗೆ ಹೋದ ಮನುಷ್ಯನು —
ನಾನು ನಿದ್ರೆಯಲ್ಲಿ ಏನೂ ಮಾಡಲಿಲ್ಲ. ಆಗ ನಾನು ನಾನಾ ಕೆಲಸಗಳನ್ನು

ಹುಟ್ಟುತ್ತೇನೆ. ಎಂದು ಅವಿದ್ಯೆಯಿಂದ ಹೇಳುತ್ತಾನೆ. ದೇಹೇಂದ್ರಿಯಗಳು
ಇರಲಿ ಇಲ್ಲದಿರಲಿ - ಅವುಗಳ ಕ್ರಿಯೆ ಇರಲಿ ಅಥವಾ ಬಿಡಲಿ —
ಕೇವಲ ಸ್ವಸ್ವರೂಪನು ಅಕ್ರಿಯನಾಗಿ ನಿತ್ಯಸತ್ಯನಾಗಿದ್ದಾನೆ. ಅವನಲ್ಲಿ
ಯಾವ ಗುಣ, ಯಾವ ಕ್ರಿಯೆಯೂ ಇಲ್ಲವೇ ಇಲ್ಲ ——

ನಿಜವಾದ ಆತ್ಮನು ಜಾಗ್ರದವಸ್ಥೆಯಲ್ಲಿ ದೇಹೇಂದ್ರಿಯಗಳ ನಾನಾ
ತ್ವ ಭೇದಗಳನ್ನೂ, ನಾನಾ ಕ್ರಿಯೆ ವ್ಯಾಪಾರಗಳನ್ನೂ ತೋರುವುದೇ ಹೊ
ರತು ಯಥಾರ್ಥವಾಗಿ ಆತ್ಮನಲ್ಲಿ ಯಾವ ಕ್ರಿಯೆಯೂ ಇಲ್ಲ. ದೇಹೇಂದ್ರಿ
ಯಗಳನ್ನೂ ಆತ್ಮನನ್ನೂ [illegible] ಜ್ಞಾನದ್ದು [illegible]
ಕಾಲವಶಾತ್ ವಾಯಿತು. ಸ್ವಸ್ವರೂಪದ [illegible] ದೇಹವು ನಾನ
ನಾನು ದೇಹ ಎಂದು ತಪ್ಪಾಗಿ ತಿಳಿಯುವವರಿಗೆ ಆತ್ಮನು ನಿಷ್ಕ್ರಿಯನು
ಎಂದರೆ ಹೊಳೆಯುವುದೇ ಇಲ್ಲ.

ಕೇವಲ ಜಾಗ್ರದ್ದೃಷ್ಟಿಯಿಂದ ನೋಡಿದರೆ ದೇಹೇಂದ್ರಿಯಗಳಿಗೂ ಆತ್ಮ
ನಿಗೂ ಸಂಬಂಧವಿದ್ದಂತೆ ಜ್ಞಾನವಾಗುತ್ತ ಇರುವುದರಿಂದ ಆತ್ಮನು
ಪ್ರವೃತ್ತಿ ನಿವೃತ್ತಿ ಕರ್ಮಗಳನ್ನು ಮಾಡಿ ಸುಖದುಃಖಗಳನ್ನು ಅನುಭವಿಸುತ್ತಿ
ದ್ದಾನೆ ಹೇಳುವುದು ಸಹಜ. ಆದರೆ ಮನುಷ್ಯನಿಗೆ ಯಾವಾಗಲೂ ಜಾಗ್ರ
ದವಸ್ಥೆಯೇ ಇರುವುದಿಲ್ಲ. ನಿದ್ರೆಯೂ - ಸ್ವಪ್ನವೂ ಬರುವುವು. ಆ ಅವಸ್ಥೆ
ಗಳನ್ನು ಆತ್ಮನೇ ಅನುಭವಿಸುತ್ತಾನೆ. ಈ ಮೂರು ಅವಸ್ಥೆಗಳು ಬರುವುದನ್ನು (ಬರುತ್ತಾ ಹೋಗುವುದನ್ನು)
ಈ ಅವಸ್ಥಾಭೇದಗಳನ್ನು ತಿಳಿಯುತ್ತಿರುವ ನಿಜವಾದ ಆತ್ಮನು ಸಾಕ್ಷಿ
ಯಾಗಿ ನಿರಂತರವಾಗಿರುತ್ತಾನೆ. ಅವನೊಬ್ಬನೇ ಸತ್ಯ. ಆ ದೃಷ್ಟಿಯಿಂದ
ನಲ್ಲಿ ಈ ಮೂರು ಅವಸ್ಥೆಗಳೂ ಒಂದು/ಸ್ವಪ್ನವಾಗಿವೆ. ನಿಜವಾಗಿ ಅವಸ್ಥಾತ್ರಯ

ಚೈತನ್ಯನಾದ ಆತ್ಮನಲ್ಲಿ ಯಾವ ಕ್ರಿಯೆಯೂ ಇಲ್ಲ. ಉಪಾಧಿಗಳಾದ ಬುದ್ಧ್ಯಾದಿ
ಇಂದ್ರಿಯಗಳಲ್ಲಿ ತೋರುವ ಕ್ರಿಯೆ. ಅಲ್ಲಿ ನಡೆಯುವ ವ್ಯಾಪಾರ ತನ್ನದು ಎಂದೆಣಿಸುವ
ತಿಳುವಳಿಕೆ ಅವಿವೇಕದಿಂದ ಉಪಾಧಿಗಳೊಂದಿಗೆ ತಾದಾತ್ಮ್ಯದಿಂದ ಬಂದಿದ್ದು
ಎಲ್ಲರಿಗೂ ಸುಷುಪ್ತಿಯಲ್ಲಿ - ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ ಜಾಗ್ರತ್ ಪ್ರಪಂಚ
ಬಹುದೂರದಲ್ಲಿ ಮನುಷ್ಯನೊಬ್ಬನು ಓಡುತ್ತಿದ್ದರೂ ನಿಂತುಕೊಂಡಿರು
ವಂತೆ ತೋರುತ್ತಿರುವಂತೆ - ಹಾಗೆಯೇ ದೇಹೇಂದ್ರಿಯಗಳು ಕೆಲಸ ಮಾಡಿ
ಮಾಡಿ - ದಣಿದು ವ್ಯಾಪಾರಮಾಡದೇ ನಿದ್ರೆ ಹೋಗಿದ್ದರೂ ದೇಹದಲ್ಲಿ
ಸೂಕ್ಷ್ಮ ಕ್ರಿಯೆಗಳು ನಡೆಯುತ್ತಲೇ ಇರುತ್ತವೆ. ಆದರೂ ದೇಹಾತ್ಮಬುದ್ಧಿಯು
ಳ್ಳವರು ನಿದ್ರೆಯಲ್ಲಿ ನಾನು ಏನೂ ಕೆಲಸ ಮಾಡುತ್ತಿಲ್ಲ ಎಂದು ತಪ್ಪಾಗಿ
ನಿಷ್ಕ್ರಿಯತ್ವವನ್ನು ಆರೋಪಿಸಿಕೊಳ್ಳುವರು.

ಆತ್ಮನು ನಿಷ್ಕ್ರಿಯನು. ಏಕೆಂದರೆ ದೇಹೇಂದ್ರಿಯಗಳಲ್ಲಿ ಯಾವ
ವ್ಯಾಪಾರವೂ ಆತನದಾಗಿರುವ ಸ್ಥಿತಿಯಿಲ್ಲ. ಆತ್ಮನಾದರೋ ಪರಿಪೂರ್ಣ
ನಾಗಿ ಅಸಂಗನಾಗಿ ನಿರವಯವನಾಗಿ ಆಕಾಶಸದೃಶನಾಗಿ ಇರುತ್ತಾ
ನೆ - ದೇಹೇಂದ್ರಿಯಗಳು - ಮಾತ್ರ ಇಲ್ಲವೇ ಇಲ್ಲ. ಆಕಾಶಸದೃಶನಾದ
ದ್ದರಿಂದಲೇ ಆತ್ಮನಲ್ಲಿ ಯಾವಾಗಲೂ ಕ್ರಿಯೆಯಿಲ್ಲ. ಎಲ್ಲೆಲ್ಲೂ ಯಾವಾಗಲೂ
ಸಂಚರಿಸುತ್ತಿರುವ ವಾಯುವನ್ನು ಆಕಾಶವು ವ್ಯಾಪಿಸಿಕೊಂಡಿದ್ದರೂ ವಾಯು
ವಿನ ಕ್ರಿಯೆಯು ಆಕಾಶದಲ್ಲಿಲ್ಲವೋ ಹಾಗೆ - ದೇಹೇಂದ್ರಿಯಗಳನ್ನು
ಆತ್ಮನು ವ್ಯಾಪಿಸಿಕೊಂಡಿದ್ದರೂ ಅವುಗಳ ಕ್ರಿಯೆಯು ಆತ್ಮನಲ್ಲಿಲ್ಲ.
ಆತ್ಮನು ಕರ್ತ ಎಂದು ನಾವು ವ್ಯವಹಾರದಲ್ಲಿ ತಿಳಿದಿದ್ದರೂ ಸ್ವಂತ ಅನು
ಭವದ ದೃಷ್ಟಿಯಿಂದ ಆತ್ಮನು ಕರ್ತನಲ್ಲ. ಆತ್ಮನು ಅಕರ್ತ ಎಂದು ತಿಳಿದವನು

ನಿಜವಾಗಿ ನೋಡಿದರೆ ಆತ್ಮನು ಕರ್ತನೂ ಅಲ್ಲ ಅಕರ್ತನೂ ಅಲ್ಲ. ಆತ್ಮನಿಗೆ
ಯಾವ ವಿಕಲ್ಪವೂ ಯಾವ ವಿಶೇಷಣವೂ ಇಲ್ಲವೇ ಇಲ್ಲ.

ದ್ವೈತವು ತೋರುತ್ತಿರುವುದು ನಿಜ. ದ್ವೈತವು ನಿಜವಲ್ಲ.

ದ್ವೈತವು ನಿಜವಲ್ಲದ ಪಕ್ಷದಲ್ಲಿ ಶಾಸ್ತ್ರೋಪದೇಶಕ್ಕೆ ವೈಯರ್ಥ್ಯವೆಂದ ಆಕ್ಷೇಪವಿದ್ದರೆ ಅದಕ್ಕೆ ಶಾಸ್ತ್ರವೇ ತನಗೆ ಎಲ್ಲಿ ಸಾರ್ಥಕ್ಯವೆಂಬುದನ್ನು ತಿಳಿಸುತ್ತೆ, ಶ್ರುತಿವಚನವಿದು — ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ ತದಿತರ ಇತರಮಭಿವದತಿ — ವಿಜಾನಾತಿ ಇತ್ಯಾದಿ — ದ್ವೈತವನ್ನು ಕಂಡವನು ಗುರುವನ್ನು ಕಂಡು ಪ್ರಶ್ನಿಸುತ್ತಾನೆ. ಪ್ರಶ್ನೆಗೆ ಪ್ರಸನ್ನನಾದ ಗುರುವು ದ್ವೈತಭೂಮಿಕೆಯನ್ನೇ ಧರಿಸಿ ಉಪದೇಶಿಸುವನು.

ಅದ್ವೈತತತ್ತ್ವವು ತಿಳಿದ ತರುವಾಯವೂ ~~ದ್ವೈತದ ತೋರಿಕೆಯು~~ ವ್ಯವಹಾರ ವಿಧಾನಗಳು ಬಾಧಕವಿಲ್ಲ. ದ್ವೈತದ ತೋರಿಕೆಯು ಆಭಾಸವೆಂಬ ವಿವೇಕವು, ಅದಲ್ಲದೆ ಅದ್ವೈತದ ಪಾರ್ಥವೆಂಬ ನಿಶ್ಚಯವು ಇರುತ್ತದಾಗಿ ಅನರ್ಥಕ್ಕೆ ಕಾರಣವಾಗುವುದಿಲ್ಲ.

ವಿಧಿನಿಷೇಧಾಃ ಅಲ್ಪಜ್ಞವಿಷಯಾಃ। ನಾಜ್ಞವಿಷಯಾಃ (ಬಾಲಃ) ನಾಪಿ ಸರ್ವಜ್ಞವಿಷಯಾಃ (ವಿದ್ವಾನ್)।

ಜಾಗ್ರತ್ ಸ್ವಪ್ನ: ಸುಷುಪ್ತಂ ಚ ಗುಣತೋ ಬುದ್ಧಿವೃತ್ತಯ: ।
ತಾಸಾಂ ವಿಲಕ್ಷಣೋ ಜೀವ: ಸಾಕ್ಷಿತ್ವೇನ ವಿನಿಶ್ಚಿತ: ॥
ಅಹಂಕಾರಕೃತಂ ಬಂಧಮಾತ್ಮನೋऽರ್ಥವಿಪರ್ಯಯಂ ।
ವಿದ್ವಾನ್ನಿರ್ವಿದ್ಯ ಸಂಸಾರಚಿಂತಾಂ ತುರ್ಯೇ ಸ್ಥಿತಸ್ತ್ಯಜೇತ್ ॥ ಭಾ $\frac{೧೧}{೧೩}$

ಸತ್ತ್ವಾತ್ ಜಾಗರಣಂ ವಿದ್ಯಾದ್ರಜಸಾ ಸ್ವಪ್ನಮಾದಿಶೇತ್ ।
ಪ್ರಸ್ವಾಪಂ ತಮಸಾ ಜಂತೋಸ್ತುರೀಯಂ ತ್ರಿಷು ಸಂತತಂ ॥

ಮಾರ್ಕಂಡೇಯ — ೩೩. ಮಹಾಲಸಯಾ ಪುತ್ರಾಯೋಪದೇಶ: (ಅಂಗುಅಯಾಸ್)
ಸಂಗ: ಸರ್ವಾತ್ಮನಾ ತ್ಯಾಜ್ಯ: ಸ ಚೇತ್ತ್ಯಕ್ತುಂ ನ ಶಕ್ಯತೇ ।
ಸ ಸದ್ಭಿ: ಸಹ ಕರ್ತವ್ಯ: ಸತಾಂ ಸಂಗೋ ಹಿ ಭೇಷಜಂ ।
ಕಾಮ: ಸರ್ವಾತ್ಮನಾ ಹೇಯೋ ಹಾತುಂ ಚೇಚ್ಛಕ್ಯತೇ ನ ಸ:
ಮುಮುಕ್ಷಾಂ ಪ್ರತಿ ತತ್ಕಾರ್ಯಂ ಸೈವ ತಸ್ಯಾಪಿ ಭೇಷಜಂ ॥

ಸೃಷ್ಟಿಯು ಚಿಂತನ್ಯ

ಯಥಾ ಮಹೋ ನಕ್ಷತ್ರಾಣಾಂ ಯಥಾ ವಾ ಮಾಧವಾನಿಲ:
ಅನುಪ್ರವಿಷ್ಟ: ಕ್ಷೋಭಾಯ ತಥಾಸೌ ಯೋಗಮೂರ್ತಿಮಾನ್ ॥

ಸ್ವಯಮಗುಣೋऽಪಿ ಜಗದ್ಯೋನಿಸ್ಸ್ವ: ಸೃಷ್ಟಿಗತಂ ರಜೋಗುಣಂ ದೃಷ್ಟ್ವಾ ಅರ್ಥಾತ್ ಭುಂಜನ್ ಪುನ: ಪುನ: ಸರ್ಗೇ ರಜೋಗುಣೇ ನಿಮಜ್ಜತಿ ತೇನ ತಾದಾತ್ಮ್ಯಂ ಲಭತೇ - ಏವಮೇವ ಸತ್ತ್ವಗುಣಂ, ತಮೋಗುಣಂ ಚ

ಉಷಸ್ಯಥೋ ಪ್ರಬುದ್ಧಸ್ತು ಜಗದಾದಿರನಾದಿಮಾನ್
ಸರ್ವಹೇತುರಚಿಂತ್ಯಾತ್ಮಾ ಪರಃ ಕೋಽಪ್ಯಪರಕ್ರಿಯಃ ॥
ಪ್ರಕೃತಿಂ ಪುರುಷಂ ಚೈವ ಪ್ರವಿಶ್ಯಾಶು ಜಗತ್ಪತಿಃ
ಕ್ಷೋಭಯಾಮಾಸ ಯೋಗೇನ ಪರೇಣ ಪರಮೇಶ್ವರಃ ॥ (ಯಥಾ ಮದೋ---॥
ಪ್ರಧಾನಾತ್ ಕ್ಷೋಭ್ಯಮಾನಾತ್ತು ಸ ದೇವೋ ಬ್ರಹ್ಮಸಂಜ್ಞಿತಃ
ಸಮುತ್ಪನ್ನೋಽಂಡಕೋಶಸ್ಥೋ ಯಥಾ ತೇ ಕಥಿತಂ ಪುರಾ ॥
ಸ ಏವ ಕ್ಷೋಭಕಃ ಪೂರ್ವಂ ಸ ಕ್ಷೋಭ್ಯಃ ಪ್ರಕೃತೇಃ ಪತಿಃ ।
ಸ ಸಂಕೋಚವಿಕಾಸಾಭ್ಯಾಂ ಪ್ರಧಾನತ್ವೇಽಪಿ ಸಂಸ್ಥಿತಃ ॥
ಉತ್ಪನ್ನಸ್ಸ ಜಗದ್ಯೋನಿರಗುಣೋಽಪಿ ರಜೋಗುಣಂ
ಭುಂಜನ್ ಪ್ರವರ್ತತೇ ಸರ್ಗೇ ಬ್ರಹ್ಮತ್ವಂ ಸಮುಪಾಶ್ರಿತಃ ॥
ಬ್ರಹ್ಮತ್ವೇ ಸ ಪ್ರಜಾಃ ಸೃಷ್ಟ್ವಾ ತತಃ ಸತ್ತ್ವಾತಿರೇಕವಾನ್
ವಿಷ್ಣುತ್ವಮೇತ್ಯ ಧರ್ಮೇಣ ಕುರುತೇ ಪರಿಪಾಲನಂ ॥
ತತಸ್ತಮೋಗುಣೋದ್ರಿಕ್ತೋ ರುದ್ರತ್ವೇ ಚಾಖಿಲಂ ಜಗತ್ ।
ಉಪಸಂಹೃತ್ಯ ವೈ ಶೇತೇ ತ್ರೈಲೋಕ್ಯಂ ತ್ರಿಗುಣೋಽಗುಣಃ ॥
ಯಥಾ ಪ್ರಾಗ್ವ್ಯಾಪಕಃ ಕ್ಷೇತ್ರೀ ಪಾಲಕೋ ಲಾವಕಸ್ತಥಾ
ತಥಾ ಸ ಸಂಜ್ಞಾಮಾಯಾತಿ ಬ್ರಹ್ಮವಿಷ್ಣುಹರಾತ್ಮಿಕಾಂ ॥
ಬ್ರಹ್ಮತ್ವೇ ಸೃಜತೇ ಲೋಕಾನ್ ರುದ್ರತ್ವೇ ಸಂಹರತ್ಯಪಿ ।
ವಿಷ್ಣುತ್ವೇ ಚಾಪ್ಯುದಾಸೀನಸ್ತಿಸ್ರೋಽವಸ್ಥಾಃ ಸ್ವಯಂಭುವಃ ॥
ರಜೋ ಬ್ರಹ್ಮಾ ತಮೋ ರುದ್ರೋ ವಿಷ್ಣುಸ್ಸತ್ತ್ವಂ ಜಗತ್ಪತಿಃ
ಏತ ಏವ ತ್ರಯೋ ದೇವಾ ಏತ ಏವ ತ್ರಯೋ ಗುಣಾಃ ॥
ಅನ್ಯೋನ್ಯಮಿಥುನಾ ಹ್ಯೇತೇ ಹ್ಯನ್ಯೋನ್ಯಾಶ್ರಯಿಣಸ್ತಥಾ ।
ಕ್ಷಣಂ ವಿಯೋಗೋ ನಹ್ಯೇಷಾಂ ನ ತ್ಯಜಂತಿ ಪರಸ್ಪರಂ ॥

ಉತ್ತರೇ ಹಿಮವಾನಸ್ತಿ ಕ್ಷೀರೋದೋ ದಕ್ಷಿಣೇ ಸ್ಥಿತಃ ।
ತತಸ್ತಸ್ಮಿನ್ನಂತರೇ ದೇವಿ ಭಾರತಂ ಕ್ಷೇತ್ರಮುತ್ತಮಂ ॥

ಅನುಭೂತೋಽಪ್ಯಯಂ ಲೋಕೋ ವ್ಯವಹಾರಕ್ಷಮೋಽಪಿ ಸನ್ ।
ಅಸದ್ರೂಪೋ ಯಥಾ ಸ್ವಪ್ನ ಉತ್ತರಕ್ಷಣಬಾಧತಃ ॥

ಉತ್ತರಕ್ಷಣಂ ಚ ಅವಸ್ಥಾಂತರತೋ ವಾ ।

ಅನ್ವಯಃ :- ಯತ್ರಯತ್ರ ಉತ್ತರಕ್ಷಣಬಾಧಃ ತತ್ರ ತತ್ರ ಸತ್ಯತಾ ನಾಸ್ತಿ ಯಥಾ ಸ್ವಪ್ನೇ ॥

ವ್ಯತಿರೇಕಃ :- ಯಃ ಅಸದ್ರೂಪೋ ನ ಭವತಿ ಸ ಉತ್ತರಕ್ಷಣೇಽಪ್ಯಬಾಧಿತ ಏವ ಭವತಿ
ಯಥಾ ಆತ್ಮಾ । ಸ ತು ನಾನುಭೂತಃ ವ್ಯವಹಾರವಿಷಯೋಽಪಿ ನೋ ।
ಸ ಆತ್ಮೈವ ಸತ್ಯಃ ಸದ್ರೂಪಃ । ತತೋಽನ್ಯನ್ಮಿಥ್ಯಾ ॥

ಉಪದೇಶಸಾಹಸ್ರೀ ವಚನಮ್ —:

ಸದ್ಬ್ರಹ್ಮಾಹಂ ಕರೋಮೀತಿ ಪ್ರತ್ಯಯಾವಾತ್ಮಸಾಕ್ಷಿಣೌ ।
ತಯೋರಜ್ಞಾನಜಸ್ಯೈವ ತ್ಯಾಗೋ ಯುಕ್ತತರೋ ಮತಃ ॥

ಸದ್ಬ್ರಹ್ಮ ಎಂಬ ವಾಕ್ಯವು ಅಪರೋಕ್ಷಜ್ಞಾನಿಯ ಮಾತು. ಅದರಿಂದ
ಆತ್ಮಬೋಧವಾಗುವುದು. ಒಂದು ಪ್ರತ್ಯಯ
ಅಹಂ ಕರೋಮಿ ಎಂಬುದೂ ಒಂದು ಅನುಭವ ಅಥವಾ ಪ್ರತ್ಯಯವು.
ಇವೆರಡಕ್ಕೂ ವಿರೋಧವಿರುವುದು —ಹೇಗೆಂದರೆ—

ಸೋಪಾಧಿಕ = ಅಹಂ - ನಾನು ಮನುಷ್ಯ - ಕರ್ತಾ - ಪರಿಚ್ಛಿನ್ನ - ಪುರುಷ ಇತ್ಯಾದಿ ರೂಪ,
ನಿರುಪಾಧಿಕ = ಬ್ರಹ್ಮ - ಆತ್ಮ - ಶಿವ - ಅಕರ್ತಾ - ಅಪರಿಚ್ಛಿನ್ನ ರೂಪ. ಸದ್ರೂಪ.

ನಾನು ಮನುಷ್ಯನೆ ಎಂಬ ಬಗೆಯ ಜ್ಞಾನವುಂಟಾಗಲು ಯಾವ ಶಾಸ್ತ್ರಬೋ-
ಧನೆಯನ್ನು ಹುಡುಕಿರುವುದಿಲ್ಲ. ಸ್ವಾಭಾವಿಕ - ಸಾಮಾನ್ಯ ತಿಳುವಳಿಕೆ.
ಬ್ರಹ್ಮಾತ್ಮ ಸದಹಂ ಎಂಬ ಜ್ಞಾನವುಂಟಾಗಬೇಕಾದರೆ ಬಹು ಸಾಧನೆ ಮಾಡಿ-
ಕೊಂಡಿರಬೇಕು. ಅದ್ದರಿಂದಲೇ ಶಾಸ್ತ್ರವಾಕ್ಯಗಳ ಪ್ರಬಲ ಪ್ರಮಾಣವಾಗಿರುವುವು.

ಜಗತ್ತು - ದೃಶ್ಯವು ಇದೆ. ಸತ್ಯವಾದದ್ದು ಎಂದು ಕೆಲವರು
ವಾದಿಸುವರು. ಅವರು ಕೊಡುವ ಯುಕ್ತಿಗಳು ಹಲವಾರು ಇರುತ್ತವೆ.
ಎಲ್ಲರಿಗೂ ಈ ದೃಶ್ಯವು ಇದೆ ಇದೆ ಎಂಬ ಜ್ಞಾನವುಂಟಾಗುತ್ತಿರು
ವುದು ಮತ್ತು ಅರ್ಥಕ್ರಿಯಾಕಾರಿಯಾಗಿರುವುದು — ಹೀಗೆಂದು —

ಇದಕ್ಕುತ್ತರ — ಅರ್ಥಕ್ರಿಯಾಕಾರಿತ್ವವೆಂಬುದು ಸತ್ಯತ್ವಸಾಧಕವಾ
ದುದಲ್ಲ. ಕನಸಿನ ನೀರು ಕೊಡುವ ಹಾಗೆ - ಇದು ಮಿಥ್ಯೆ ತಾನೇ.

ಎಲ್ಲರಿಗೂ ಇದೆ ಇದೆ ಎಂಬ ಜ್ಞಾನವುಂಟಾಗುತ್ತಿರುವುದೇ
ದೃಶ್ಯಸತ್ಯತ್ವಕ್ಕೆ ಪ್ರಮಾಣ ಎಂಬುದು ಸರಿಯಲ್ಲ. ಅಂತಹ ಜ್ಞಾನವು
ಇದೆಯೋ? ಇದೆ ಎನ್ನುವುದಾದರೆ ಆ ಜ್ಞಾನಕ್ಕೆ ಸಾಕ್ಷಿಯಾಗಿ
ಮತ್ತೊಂದು ಜ್ಞಾನವಿರಬೇಕಾಯಿತು (ಏಕೆಂದರೆ ಸತ್ಯತ್ವಕ್ಕೆ ಸಾಕ್ಷಿ
ಜ್ಞಾನವೇ ಪ್ರಮಾಣ ತಾನೇ ವಾದಿಗಳದ್ದು) ಆ ಎರಡನೆಯದಕ್ಕೂ ಹಾಗೆ
ಅನಂತಜ್ಞಾನಪರಂಪರೆಯನ್ನು ಕೊಟ್ಟರೂ ಸಾಕಾಗದೆ ಕೊನೆಗೆ
ಒಂದು ಸ್ವತಸ್ಸಿದ್ಧವಾದ ಸಾಕ್ಷಿಯನ್ನು ಒಪ್ಪಬೇಕಾಗುವುದು.

ಒಂದು ಅವಸ್ಥೆಯಲ್ಲಿನ ವಸ್ತುವನ್ನು ಮತ್ತೊಂದು ಅವಸ್ಥೆಯಲ್ಲಿ
ಉಪಯೋಗಿಸಲು ಶಕ್ಯವಿರುವುದಿಲ್ಲ.

ಆದ್ದರಿಂದ ದೃಶ್ಯವೆಲ್ಲ ಮಿಥ್ಯಾ - ಸತ್ಯವೆಂದು ಅಲ್ಲ.

ಧರ್ಮಂ ಪ್ರಸಂಗಾದಪಿ ನಾಚರಂತಿ ಪಾಪಂ ಪ್ರಯತ್ನೇನ
ಸಮಾಚರಂತಿ। ಆಶ್ಚರ್ಯಮೇತದ್ಧಿ ಮನುಷ್ಯಲೋಕೇ
ಸುಧಾಂ ಪರಿತ್ಯಜ್ಯ ವಿಷಂ ಪಿಬಂತಿ॥

ಪಶ್ಯನ್ನಪಿ ಯಥಾ ಲಕ್ಷ್ಮ ಜಗತ್ಸೋಮೇ ನ ವಿಂದತಿ।
ಏವಮಸ್ತಿ ನ ಚೋತ್ಪನ್ನಂ ನ ಚ ತನ್ನ ಪರಾಯಣಂ॥

ಆತ್ಮಾ ಕ್ಷೇತ್ರಜ್ಞ ಇತ್ಯುಕ್ತಃ ಸಂಯುಕ್ತಃ ಪ್ರಾಕೃತೈರ್ಗುಣೈಃ।
ತೈರೇವ ತು ವಿನಿರ್ಮುಕ್ತಃ ಪರಮಾತ್ಮೇತ್ಯುದಾಹೃತಃ॥
— ಮಹಾಭಾರತೇ ಶಾಂತಿ — 187 — 23.

ವಿಜ್ಞಾನದಭ್ಯಾಸಿಗಳು ವೈಜ್ಞಾನಿಕರೆಂಬ ಕಾರಣಗಳ ಬಗ್ಗೆ ತಿಳಿ ಸಂಪಾದ
ಪಡುತ್ತಿರುವವರನ್ನು ಕುರಿತು ದಾಸವರೂಪ್ಯರು ವಿವರಿಸಿದ್ದಾರೆ—
ಸೂರ್ಯನಿಗೆ ಮದುವೆ ಮದುವೆ ಎಂದು ಕಪ್ಪೆಗಳು ಸಂಭ್ರಮದಿಂದ ಕೂಗಾಡುತ್ತವಂತೆ. ಎಂ
ಅವು ಯೋಚಕರಲ್ಲ. ಮದುವೆಯಾದ ಮೇಲೆ ಸೂರ್ಯನಿಂದ ಅನೇಕ ಮರಿಸೂರ್ಯರು ಹು
ಹುಟ್ಟಿದರೆ ತಾವ ಎಷ್ಟು ಕಷ್ಟಪಡಬೇಕು! ಜಲಾಶಯಗಳ ಗತಿ ಏನು ಎಂದು!

ಭಾಗ ೧೧-೪೮

ದೇಹಾದ್ಯಪಾರ್ಥರಸನಾಭಿತತ್ತ್ವಾದ್ ಭಜ್ಯೇ ನ ಸಾಕ್ಷಾತ್ ನ ಭಿದಾಽಽತ್ಮನಃ ಸ್ಯಾ
ಹ್ಯೇತೋ ನ ಬಂಧಸ್ತಸ್ಯ ನೈವ ಮೋಕ್ಷಃ ಸ್ಯಾತಾಂ ನಿಕಾಮಸ್ತ್ವಯಿ ಸೋಽವಿವೇಕಃ ॥

ವಸ್ತುತತ್ತ್ವನಿರ್ಣಯಕ್ಕೆ ವೇದಾಂತವೇ ಮುಖ್ಯವಾಗಿ ದಿಗ್ದರ್ಶಕವಾಗುತ್ತದೆ.
ಉಪನಿಷತ್ತುಗಳನ್ನೇ ಸ್ಫುಟನೆ ಮತ್ತೆ ಯಾರೂ ವಿವೇಚನೆ ಮಾಡಿದ್ದಾರೆ
ಪುಸ್ತಕಗಳಲ್ಲಿ ಬರೆದಿದೆ ಎಂದರೆ, ಬೇರೆ ಇಲ್ಲ. ಬರೆದಿರುವ ಕನ್ನಡ
ಕಗ್ಗ ಸಹಾಯದಿಂದ ವಸ್ತುನಿಷ್ಠರಾಗಲು ಪ್ರಯತ್ನ ಪಡುತ್ತೇವೆ ನಾವು.

ಸ್ವಭಾವೋಽಧ್ಯಾತ್ಮಮುಚ್ಯತೇ ಎಂಬ ವ್ಯಾಖ್ಯಾನವನ್ನು ಸ್ವಭಾವಸ್ಥ ಪ್ರವೃತ್ತಿ ಎಂಬ ದರ್ಶನವನ್ನು ಮನನ ಮಾಡಿಕೊಂಡಾಗ ಈ ಸಂಸಾರವೆಲ್ಲಾ ಕೇವಲ ಮನಸ್ಸಿನ ಕಲ್ಪನೆ ಎಂದೂ ವಿದ್ಯುತ್ಕಾಂತವೆಂದೂ ಖಚಿತವಾಗುವುದು. ಈ ನಿರ್ಣಯವು ಸ್ಥಿರವಾದಾಗ ತಾನು ಎಲ್ಲಾ ವಿಷಯದಲ್ಲೂ ಉದಾಸೀನನೇ ಆಗಿರುತ್ತಾನೆ. ಆಗ ಮನಸ್ಸನ್ನು ಆತ್ಮನು ಅನುವರ್ತಿಸುವುದು ನಿಂತು ಹೋಗುತ್ತದೆ. ಒಡನೆಯೇ ಮನಸ್ಸು ನಿರ್ಜೀವದಂತೆ ನಿಸ್ತೇಜವಾಗಿ ತನ್ನ ಪರಾಕ್ರಮವನ್ನೆಲ್ಲಾ ಕಳೆದುಕೊಳ್ಳುವುದು. ಆಗ ಕಲ್ಪನೆಗಳು ನಿಲ್ಲತೊಡಗುವುವು. ವಿದ್ಯುತ್ಕಾಂತವು ನಾಶವಾಗುವುದು. ಅದೇ ವೈರಾಗ್ಯ.

ಈ ದೃಶ್ಯವಾದ ಸ್ಥೂಲಕ್ಕೆ ಆತ್ಮನೆಂದು ವಿಶ್ವನೆಂದು ಹೆಸರು ಕೊಟ್ಟಿದೆ ತೈಜಸ ಪ್ರಾಜ್ಞನು. ಅವನೇ ವೈಶ್ವಾನರಾಗ್ನಿಯು. ಆ ಅಗ್ನಿಯೇ ಪರಮನಾದ ಅಗ್ನಿದೇವನು. ಅವನೇ ಅಂತರಾತ್ಮನು, ಪರಮಾತ್ಮನು. ಈ ಚಿಂತನೆಯು ತ್ವಾಮಗ್ನೇ ಮಾನುಷೀರೀಳತೇ ವಿಶೋ ಹೋತ್ರಾವಿದಂ ವಿವಿಚಿಂ ರತ್ನಧಾತಮಂ । ಗುಹಾ ಸಂತಂ ಸುಭಗ ವಿಶ್ವದರ್ಶತಂ ತುವಿಷ್ವಣಸಂ ಸುಯಜಂ ಘೃತಶ್ರಿಯಂ ಈ ಮಂತ್ರದಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿದೆ. ಇದಕ್ಕೆ ಅನ್ವಯಿಸಿ

ಅಪ್ಸ್ವಗ್ನೇ ಸಧಿಷ್ಟವ ಸೌಷಧೀರನು ರುಧ್ಯಸೇ । ಗರ್ಭೇ ಸಂಜಾಯಸೇ ಪುನಃ ಎಂದು ಮಂತ್ರವಿದೆ.

ವೃಷಾ ಸೋಮ ದ್ಯುಮಾಂ ಅಸಿ ವೃಷಾ ದೇವ ವೃಷವ್ರತಃ । ವೃಷಾ ಧರ್ಮಾಣಿ ದಧಿಷೇ ॥

ಅಂತರಾತ್ಮನು ದೇಹೇಂದ್ರಿಯ ಸರ್ವಾಂಗಗಳನ್ನು ಪ್ರಕಾಶಿಸುತ್ತಾನೆ- ಚೇತನ
ಗೊಳಿಸುತ್ತಾನೆ. ಇದು ಎಲ್ಲರಿಗೂ ತಿಳಿದಿದೆ. ದೇಹದಲ್ಲಿ ಒಬ್ಬನೇ ಒಬ್ಬ ಆತ್ಮನಿರುತ್ತಾ
ನೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅನೇಕಾತ್ಮರುಗಳಿದ್ದರೆ ವ್ಯಾಪಾರ ವ್ಯವಹಾರ
ಯಾವುದೂ ಸರಿಯಾಗಿ ನಡೆಯುತ್ತಲೇ ಇರಲಿಲ್ಲ. ಇಷ್ಟು ವಿಚಾರವು ದೇಹೇಂದ್ರಿ
ವಿಶಿಷ್ಟನಾದ ಆತ್ಮನ ಅಂದರೆ ದೇಹಿಯ ವಿಷಯ ನಿರ್ಣಯವಾಗುತ್ತಷ್ಟೆ.
ಇನ್ನು ಈ ದೇಹಿ ಎಂಬ ಆತ್ಮನ ನಿಜವಾದ ಸ್ವರೂಪವೇನು ಎಂಬುದನ್ನು
ವಿಚಾರ ಮಾಡಬೇಕು. ಒಮ್ಮೆ ಮನುಷ್ಯನು ಎಚ್ಚರವಾಗಿದ್ದು ದೇಹೇಂದ್ರಿಯಗಳಿಂದ
ಕರ್ಮಗಳನ್ನು ಮಾಡುತ್ತಾನೆ. ವ್ಯವಹಾರಗಳನ್ನು ನಡೆಸುತ್ತಿರುತ್ತಾನೆ. ಇದೊಂದು ಅವಸ್ಥೆ.
ಈ ಅವಸ್ಥೆಯ ದೃಷ್ಟಿಯಿಂದ ಬಾಹ್ಯವಾದ ಜಗತ್ತೆಲ್ಲವೂ ಪ್ರತ್ಯಕ್ಷಾನುಭವಕ್ಕೆ ವಿ
ಷಯವಾಗಿರುವುದರಿಂದ ಇದೆಲ್ಲವೂ ಅಂದರೆ ತನ್ನ ದೇಹವೇ ಮೊದಲಾದ
ಸಮಸ್ತ ವಿಷಯಗಳೆಲ್ಲವೂ ಸತ್ಯ. ಮತ್ತು ತಾನು ಎಂಬ ಅಹಂತಾಸ್ಪದವಾಗಿರು
ವವನೂ ಸತ್ಯ. ಎಂಬ ತಿಳುವಳಿಕೆಯುಂಟಾಗುವುದು ಸಾರ್ವತ್ರಿಕವಾಗಿರುತ್ತದೆ.
~~ಮಾಡ~~ ಈ ತರಹ ವಿವೇಚನೆಯು ನಿರ್ಣಯವನ್ನೇನೂ ಮಾಡಿಕೊಂಡಿರುವುದಿಲ್ಲ. ಆದರೆ
ನಾನು ನನ್ನದು ಎಂಬ ಈ ಅಜ್ಞಾನವೇ ಸಕಲ ವ್ಯವಹಾರಗಳಿಗೂ ಮೂಲಾಧಾರವಾಗಿರು
ಇನ್ನು ಎರಡನೇ ಅವಸ್ಥೆ- ~~[illegible]~~ ಸ್ವಪ್ನ ಎಂಬುದು. ಮನುಷ್ಯನು ಕನಸನ್ನು
ಅನುಭವಿಸುವನಷ್ಟೆ. ಎಚ್ಚರವಾಗಿರುವಾಗ ಹೇಗೆ ಸುಖದುಃಖಗಳ ಅನುಭವವುಂ
ಟಾಗುವುದೋ ಹಾಗೆಯೇ ಕನಸಿನಲ್ಲೂ ಸುಖಾನುಭವ ಅಥವಾ ದುಃಖಾನುಭ
ವವಾಗುವುದು. ಹೀಗೆ ಈ ಎರಡು ಅವಸ್ಥೆಗಳಲ್ಲಿನ ಅನುಭವವು ಪರಿಣಾಮ
ದೃಷ್ಟಿಯಿಂದ ಸಮ ಅಥವಾ ಏಕವೇ ಆಗಿದ್ದರೂ ಲೌಕಿಕರು ಮಾತ್ರ ಕನಸು
ಸುಳ್ಳು ಎಂದು ಹಾರಿಸಿಬಿಡುವರು. ಎಚ್ಚರದ ಪ್ರಪಂಚಕ್ಕೆ ಬೆಲೆಕೊಟ್ಟುಕೊಂಡು
ಅದಕ್ಕೆ ಸತ್ಯತೆಯನ್ನು ಒಪ್ಪಿಕೊಂಡು ತಮ್ಮ ಈ ಬಾಹ್ಯವ್ಯವಹಾರದ ಕೌಶಲ್ಯವ
ಸುಜ್ಞಾನವೆಂದು ಸಂಭ್ರಮಿಸುತ್ತಿರುತ್ತಾರೆ. ಅಂದರೆ ತಮ್ಮ ನಿಜವಾದ ಅನುಭವಕ್ಕೆ

ಬೇರೆಯಿಲ್ಲ. ತಮ್ಮ ನಿಜವಾದ ಆತ್ಮನಿಗೂ ಬೇರೆಯಿಲ್ಲ. ಇನ್ನು ತಮ್ಮ ಸ್ವರೂಪ
ಕ್ಕಿಂತ ಪೃಥಕ್ಕಾದ ಈ ಬಾಹ್ಯಪ್ರಪಂಚ ವಿಷಯಗಳಿಗೇ ಹೆಚ್ಚು ಪ್ರಾಮುಖ್ಯ.
ವಸ್ತುತಃ ಈ ಹೊರಗಿನ ವಿಷಯಗಳು [illegible] ಆಂತರಾತ್ಮನಂತೆ ಸತ್ಯವೇ
ಅಲ್ಲ. ಸುಖರೂಪವೂ ಅಲ್ಲ. ಮತ್ತು ನಂಬಿಸಿಕೊಳ್ಳುವಂತೆ ಎಂದೂ
ನಾಶವಾಗಿ ಅಥವಾ ದೂರವಾಗಿ ದುಃಖವನ್ನೇ ಕೊಡತಕ್ಕವುಗಳಾಗಿರುತ್ತವೆ.
ಈ ವಾಸ್ತವಾಂಶವನ್ನು ಅರಿಯದೇ ಲೌಕಿಕರು ವ್ಯವಹಾರದಲ್ಲಿ ಮಗ್ನರಾಗಿರುತ್ತಾರೆ.
ಇರಲಿ. ಅಂತು ಕನಸಿನ ಅನುಭವ ಮತ್ತು ಎಚ್ಚರದ ಅನುಭವ ಇವೆರಡೂ
ನಮ್ಮ ನಿಜವಾದ ಆತ್ಮನ ದೃಷ್ಟಿಯಿಂದ ಒಂದೇ ತರಹದ್ದಾಗಿರುತ್ತವೆ. ಕನಸಿನ
ಲ್ಲೂ ನಾನು ನನ್ನದು ಎಂಬ ವಿಶೇಷ ಜ್ಞಾನವೇ ಆ ಕಾಲದ ಎಲ್ಲಾ ವ್ಯವಹಾರಗಳಿಗೂ
ಆಧಾರವಾಗಿರುವುದು.

ಇನ್ನು ಮೂರನೇ ಅವಸ್ಥೆ- ನಿದ್ರೆ ಎಂಬುದು. ಮನುಷ್ಯನು ಎಚ್ಚರ ಕನಸುಗಳ
ನ್ನು ಅನುಭವಿಸುವಂತೆ ನಿದ್ರೆಯನ್ನು ಅನುಭವಿಸುತ್ತಾನೆ. ಆದರೆ ನಿದ್ರೆಯಲ್ಲಿ
ವಿಚಾರದಿಂದ ನಿರ್ಣಯಿಸಿಕೊಳ್ಳಬಹುದಾದಂತಹ ಒಂದು ಸೂಕ್ಷ್ಮಾಂಶವಿರುವುದು.
ಎಚ್ಚರ ಕನಸುಗಳೆರಡರಲ್ಲೂ ವ್ಯವಹಾರಕ್ಕೆ ಆಧಾರವಾಗಿದ್ದ ನಾನು ನನ್ನದು ಎಂಬ
ವಿಶೇಷ ಜ್ಞಾನವೇ ಇರುವುದಿಲ್ಲ. ಆದರೆ ಮನುಷ್ಯನು ತಾನು ಮಾತ್ರ ಸುಖ
ವಾಗಿ ನಿದ್ರಿಸುತ್ತಿರುತ್ತಾನೆ. ಸತ್ತು ಹೋಗಿಲ್ಲವಲ್ಲಾ ಅಥವಾ ಮೂರ್ಛೆ ಬಿದ್ದಿರು
ವುದಿಲ್ಲ. ಆನಂದವಾಗಿ ಮಲಗಿರುತ್ತಾನೆ. ಆ ಸಮಯದಲ್ಲಿ ವಿಶೇಷಜ್ಞಾನವಿಲ್ಲದ ಮಾತ್ರಕ್ಕೆ ಜ್ಞಾನವೇ ಇರಲಿಲ್ಲ ಪ್ರಜ್ಞೆಯೇ ಇರಲಿಲ್ಲ
ಎಂದು ಹೇಳುವುದಕ್ಕಿಲ್ಲ. ಏತಕ್ಕೆಂದರೆ ಮೃತ ಮೂರ್ಛಿತರಲ್ಲಿರುವಂತೆ ದುಃಖಾನು
ಭವ ಇತ್ತೇ? ಇಲ್ಲ. ಅಷ್ಟುಮಾತ್ರವಲ್ಲದೇ ಎಚ್ಚರ ಕನಸುಗಳಲ್ಲಿ ಇರಬಹು
ದಾದ ಹಸಿವು ಬಾಯಾರಿಕೆ ರೋಗ ಚಿಂತೆ ಆಸೆ ಮುಂತಾದ ದುಃಖಗಳು
ತೊಲಗಿರುತ್ತವೆ. ಕನಸಿನಲ್ಲಿ ಕಾಣಬಹುದಾದ ದುಃಖಭಯಗಳೂ ತೊಲಗಿರುತ್ತವೆ.
ಅಂದರೆ ಆತ್ಮನು ತನ್ನ ನಿಜವಾದ ಆನಂದರೂಪದಲ್ಲಿ ಇರುತ್ತಾನೆ ಎಂದು ನಿಶ್ಚಯಿಸಬಹುದು,
ನಿರ್ವಿಶೇಷಜ್ಞಾನ [illegible]

ಮನುಷ್ಯನು ತನ್ನ ಸ್ವರೂಪವನ್ನು ಸರಿಯಾಗಿ ತಿಳಿಯದಿರುವುದರಿಂದ
ಸಂಸಾರದುಃಖಕ್ಕೊಳಗಾಗಿರುತ್ತಾನೆ. ಹೇಗೆಂದರೆ— ತಾನು ಯಾರು ಎಂಬು
ದನ್ನು ಖಚಿತವಾಗಿ ತಿಳಿದಿರುವುದಿಲ್ಲ. ಇದು ಅಜ್ಞಾನ. ಇಷ್ಟು ಮಾತ್ರವಲ್ಲ
ದೇಹವೇ ತಾನು ಎಂದು ತಿಳಿದಿರುತ್ತಾನೆ. ಇದು ಅಜ್ಞಾನವೇ = ಭ್ರಾಂತಿಯು
*ತಪ್ಪಾದ ತಿಳುವಳಿಕೆಯು ಜನ್ಮಜನ್ಮಾಂತರಗಳಿಂದ ಬೆಳೆದು ಬಂದಿರುವುದು.
(ಅಜ್ಞಾನವಿಲ್ಲದ ಅಜ್ಞಾನಿಯಾದ) ಇರುವ ಮನುಷ್ಯನ ಸ್ವಾಭಾವಿಕವಾದ ಅನುಭವವೇನೆಂದರೆ – ತಾನು
ಇದ್ದಾನೆ. ಸುಖದುಃಖಗಳನ್ನು ಅನುಭವಿಸಿಕೊಂಡಿದ್ದಾನೆ. ಇಷ್ಟು ತಿಳಿ
ವಳಿಕೆ ಇರುತ್ತೆ. ಈ ತಿಳುವಳಿಕೆಯ ಹಿನ್ನೆಲೆಯಲ್ಲಿ ಮನುಷ್ಯನು
ಸುಖವನ್ನು ಪಡೆಯಲೂ ದುಃಖವನ್ನು ತಪ್ಪಿಸಿಕೊಳ್ಳಲೂ ಧರ್ಮಾಧರ್ಮ
ಎಂಬ ಮಾರ್ಗಗಳನ್ನು ಗೊತ್ತುಪಡಿಸಿಕೊಂಡು ಕರ್ಮಗಳನ್ನು ಮಾಡಿಕೊಂಡು
ಬರುತ್ತಿರುವನು. ಕರ್ಮಗಳು ಫಲಕೊಡುವುದು ಸ್ವಾಭಾವಿಕ. ಹಿಂದಿನ
ಕರ್ಮವಿಪಾಕಕ್ಕನುಸಾರವಾಗಿ ಫಲ ದೊರೆಯುವುದು. ಶುಭಫಲ
ದೊರೆತಾಗ ಆನಂದಾನುಭವಿಸುತ್ತ ಉಲ್ಲಾಸಗೊಳ್ಳುವುದೂ—
ಅಶುಭಫಲ ಪ್ರಾಪ್ತವಾದಾಗ ಕುಗ್ಗುವುದೂ – ಇವೆರಡೂ ವಿಕಾರಗಳಾಗಿ
ವಿಷಯಾನುಭವ ಕೊಡುವುದೇ ಮನುಷ್ಯನ (ತನ್ನ) ಸ್ವಭಾವ ಎಂಬ ತಿಳಿ
ವಳಿಕೆಯು ಸಾಮಾನ್ಯವಾಗಿರುವುದು. ಸುಖಾನುಭವವನ್ನು ಅರಸುವನು.
ದು ಅದರೊಡನೆ ದುಃಖವು ಬರುವುದು ಇದಕ್ಕೆ ಕಾರಣ ಅಜ್ಞಾನ.

ಅಗ್ನಿರ್ಮೂರ್ಧಾ, ವಾಯುರ್ಮಧ್ಯೇ,
ಸಾಹಸ್ರಶೀರ್ಷಸ್ಯ ಚಕ್ಷುಃ = (ನೇತ್ರ) ಪ್ರತಿರೂಪಃ [illegible]

ಅವಿಕಾರಿಯಾದ ಬ್ರಹ್ಮನಿಗೆ ಅಗ್ನಿ ವಾಯು ಸೂರ್ಯ ಇವುಗಳನ್ನು ಹೇಳಿದೆ ಎಂದರೆ ಒಂದೊಂದು ದೃಷ್ಟಿಯಿಂದ ಎಂದರೆ ಒಂದೊಂದು ಸ್ವರೂಪ ಸಿದ್ಧಿಯ ದೃಷ್ಟಿಯಿಂದ ಕಾಣುವ ಉಪನಿಷತ್ತಿನಲ್ಲಿ ಹೇಳಿರುವುದು. ಬೇರೆಯ ಸ್ವರೂಪವುಳ್ಳದು. ಸಾಕಾರವಾಗಿಯೂ ಗೋಚರವಾಗುವುದು. ಉಪಾಧಿಯಲ್ಲ ನಿರಾಕಾರವಾಗ ಪ್ರತ್ಯಕ್ಷವಾಗುವುದು ಮಾತ್ರವಾಗಿ ಅಗ್ನಿಯು ನಿರಾಕಾರವೇ [illegible] ಪ್ರತ್ಯಕ್ಷವಾಗುತ್ತದೆ. ಸ್ವರೂಪಸತ್ತೆಯುಳ್ಳ ನಿರಾಕಾರ ಅಗ್ನಿಯು ಪ್ರತ್ಯಕ್ಷವಾಗುವುದಿಲ್ಲ. [illegible] [illegible] ಚಕ್ಷುಸ್ಸಿಗೆ ಗೋಚರವಾಗುವುದಿಲ್ಲ. ಹಾಗೆಯೇ ವಾಯುವು ಸ್ವರೂಪವುಳ್ಳದು - ಅನುಭವಕ್ಕೆ ಗೋಚರವಾಗುವುದು [illegible] ಚಕ್ಷುಸ್ಸಿಗೆ ಗೋಚರಿಸುವುದಿಲ್ಲ. ಉಪಾಧಿಕೃತವಾದ ರೂಪವಿಲ್ಲ, ವಾಯುವು ನಿರಾಕಾರವೇ? ಅಲ್ಲ. ಆದಾಗ್ಯೂ ನಮಗೆ ಪ್ರತ್ಯಕ್ಷವಾಗದು. [illegible] ಮಾತ್ರದಿಂದಲೇ ನಾವು ವಾಯುವಿಗೆ ಉಪಾಧಿಸಂಬಂಧವನ್ನು ಹೇಳುವ ವಾಯುವಿಗೆ [illegible] ಇಲ್ಲ. ಶ್ರೋತ್ರಕ್ಕೆ ಗೋಚರವಾಗುವುದಿಲ್ಲ. ಅಂತೆ ವಾಯುವು ಸ್ವರೂಪಸತ್ತೆ ಉಳ್ಳದ್ದು. ಚಕ್ಷುಷ ವಿಷಯವಲ್ಲ. ತ್ವಗಿಂದ್ರಿಯ ವಿಷಯ. [illegible] ಅಲ್ಲ. [illegible] [illegible] [illegible]

∴ ತೇಜಃ ಬ್ರಹ್ಮ. ಪ್ರಾಣಸ್ಯ ಪ್ರಾಣಃ

∴

ಸತ್ತ್ವತತ್ತ್ವವೇ ಪರಮಾತ್ಮ - ವಿಷ್ಣುವು }
ಅಹಂ ತತ್ತ್ವವೇ ಜೀವಾತ್ಮ - ಅಕ್ಷರನು } = ಸಚ್ಚಿದಾನಂದ ಬ್ರಹ್ಮವೇ

ಅಕ್ಷರನು ಲೋಕದಲ್ಲಿ ದಾನನಂತೆ ಕಂಡರೂ ಬ್ರಹ್ಮವೇ
ವಿಷ್ಣುವು ವೈಕುಂಠದಲ್ಲಿ ಲಕ್ಷ್ಮೀಪತಿಯಂತೆ ಕಂಡರೂ ಬ್ರಹ್ಮವೇ
ಜೀವಾತ್ಮ ಪರಮಾತ್ಮ ತತ್ತ್ವಗಳೆರಡೂ ಜೀವಬುದ್ಧಿಯಿಂದಲೇ ಕಲ್ಪಿತ.
ಈ ಬುದ್ಧಿ ಬುದ್ಧಿವೃತ್ತಿಗಳಿಗೆಲ್ಲಾ ಸಾಕ್ಷಿಯಾದ ಆತ್ಮವೇ ಪರಬ್ರಹ್ಮವು.

ಕಾರ್ಯೋಪಾಧಿರಾತ್ಮ ಜೀವಃ }
ಕಾರಣೋಪಾಧಿರಾತ್ಮ ಈಶ್ವರಃ } ಉಪಾಧಿಭೇದಮಾತ್ರ

ಕಾರಣಮಚಿಂತ್ಯಶಕ್ತಿಃ ॥ ದೇಹೇಂದ್ರಿಯ ಸಂಘಾತರೂಪಂ ಕಾರ್ಯಂ ॥

ಆತ್ಮನು ಕೇವಲ - ನಿರ್ವಿಶೇಷ ಜ್ಞಾನಸ್ವರೂಪನಾಗಿರುವನು.
ಈ ಆತ್ಮನ ಅಜ್ಞಾನವು. ತನ್ನ ಸ್ವಭಾವಿಕವಾಗಿ [illegible] ಇರುತ್ತದೆ
[illegible] ಆತ್ಮನಿಗೆ ಉಪಾಧಿಯಿಂದಲೂ - [illegible]
ತೆ ಅಭ್ಯಾಸವಿದ್ದರೆ ವಿಶೇಷವಾಗಿರುವ ಜ್ಞಾನ [illegible]. [illegible]

[illegible]
ಸಾಕ್ಷ್ಯ/[ಆತ್ಮಕ್ಕೆ] ಸಾಕ್ಷಿ
ದೃಶ್ಯ/[...]ಕ್ಕೆ ದ್ರಷ್ಟ — ಗಂತವ್ಯ/[...]ಕ್ಕೆ ಗಂತ
ಶಬ್ದ[...]ಕ್ಕೆ ಶ್ರೋತ — ರಸಕ್ಕೆ ರಸಯಿತ
ವಾಚ್ಯ/[...]ಕ್ಕೆ ವಕ್ತ — ಗಂಧಕ್ಕೆ ಘ್ರಾತ
ಕರ್ತವ್ಯ/[...]ಕ್ಕೆ ಕರ್ತ — ಮಂತವ್ಯಕ್ಕೆ ಮನಸ್ಸು
ಭೋಜ್ಯ/[...]ಕ್ಕೆ ಭೋಕ್ತ — ಜ್ಞೇಯಕ್ಕೆ ಬುದ್ಧಿ
ಸ್ಪರ್ಶ[...]ಕ್ಕೆ ಸ್ಪ್ರಷ್ಟ

ದೇಹಕಾಲಾದಿಯಾಗಿ ಈ ಸಕಲವೂ ಅದ್ವಯ/ಸತ್ಯ.

ಅಧ್ಯಾತ್ಮ ವಿದ್ಯೆಯು - ಈ ಮತವು - ಅನುಮಾನಗಳನ್ನು ಬೋಧಿಸುವುದಿಲ್ಲ. ಆಶಾವಾದಿತೆಯನ್ನು ಬೋಧಿಸುವುದಿಲ್ಲ. ಸ್ವಾಭಾವಿಕವಾದ ಅವಿದ್ಯೆಯನ್ನು ಪ್ರಯತ್ನದಿಂದ ಶಾಸ್ತ್ರ ಅರ್ಥ ವಿಚಾರಮಾಡಿಯೇ ಹೋಗಲಾಡಿಸಿಕೊಳ್ಳಬೇಕು. ಹೊರತು ಬೇರೆ ಸಾಧ್ಯವಿಲ್ಲ. ಪುರುಷ ಪ್ರಯತ್ನವು ಬೇಕೇಬೇಕು. ಉತ್ತಿಷ್ಠ ಜಾಗ್ರತ - ಪ್ರಾಪ್ಯ ವರಾನ್ನಿಬೋಧತ ಎಂದು ಯತ್ನಶೀಲನಾಗಿರಲು ಉಪದೇಶಿಸುತ್ತದೆ. ಮತ್ತೆ ನೋಡಿದರೆ ಅಯತ್ನಶೀಲನಾದವನಿಗೆ ಭಯ ತಪ್ಪದು ಎಂದು ಎಚ್ಚರಿಕೆ ಕೊಡುತ್ತದೆ. ಕೇವಲ ದೈವಾಧೀನವೆಂಬ ಮತವು ಸೋಮಾರಿತನವನ್ನು ಬೋಧಿಸುತ್ತೆಂದು ಹೇಳಬಹುದು.

೨ನ್ನ ಶಿಷ್ಯನ ಆಕ್ಷೇಪವಾಗುವುದು - ಫಲ - ದೈನ್ಯತೆ.

ಆದ್ದರಿಂದ ಫಲಪ್ರಾಪ್ತಿಗಾಗಿ ಯತ್ನ ಮಾಡಬೇಕಾದುದು ಆವಶ್ಯಕವೆಂದೇ ಬೋಧಿಸಲ್ಪಡುವುದು. ಇದು ಆರೋಪದಲ್ಲಿ ಅನ್ವಯಿಸುತ್ತೆ. ಇಷ್ಟ ಪ್ರಾಪ್ತಿ ವರೆಗೂ ಪ್ರಯತ್ನ. ಇಷ್ಟ ಸಿದ್ಧಿ ಆದಮೇಲೆ ಯತ್ನವಿಲ್ಲ ಇದೇ ಆರೋಪದ ಅನುಭವ.

ಶ್ರುತ್ವಾಪಿ ದರ್ಶನಂ ತಸ್ಯ ಯಾದೃಷ್ಟ ಮವಲಂಬತೇ
ಧೀರಾಸ್ತಂ ನ ಪಶ್ಯಂತಿ ಪಶ್ಯಂತ್ಯಾತ್ಮಾನಮವ್ಯಯಂ ॥

ಮೂರನೇ ಅವಸ್ಥೆಯಲ್ಲಿರುವ ಸುಷುಪ್ತಿಯಲ್ಲಿ ಅಖಂಡಾನುಭವದಲ್ಲಿ ಆನಂದವನ್ನನುಭವಿಸುತ್ತ ದುಃಖವಿಲ್ಲದವನು ಆಗಿರುವುದು ಎಲ್ಲರ ಅನುಭವವಾಗಿದೆ. ಹೀಗಿರುವಾಗ ನಾಲ್ಕನೆಯು (ಅನುಸ್ಯೂತ ತುರೀಯ ಆತ್ಮನು = ಪ್ರಾಣಿಗಳ ಜೀವಾತ್ಮನು) ದುಃಖಸಂಪರ್ಕವಿಲ್ಲದವನಾಗಿ ನಿತ್ಯಾನಂದಾನುಭವರೂಪನು ಆಗಿರಬೇಕಲ್ಲವೆ?

ಸ್ಥೂಲ ಸೂಕ್ಷ್ಮ ಕಾರಣಗಳೆಂಬ ಪುರಗಳನ್ನು ಅವುಗಳಲ್ಲಿ ಅಭಿಮಾನ ವಿಟ್ಟುಕೊಂಡು ಅನುಭವಿಸುತ್ತಿರುವ ತ್ರಿಪುರರನ್ನು ಉಪಸಂಹರಿಸಲು ಪ್ರಜ್ಞಾನ - ಪ್ರಬೋಧ - ಸಮ್ಯಜ್ಞಾನವೆಂಬ ಪಾಶುಪತಾಸ್ತ್ರವೇ ಬೇಕು. ಆದ್ದರಿಂದ ಪಾಶುಪತವೆಂಬ ಮತವೇ ಭಾಗವತರಾದ ಸನ್ಯಾಸಿಗಳ ಮತ - ಮಾರ್ಗ

ವಿಚಾರಶೀಲನಾದ ಅದ್ವೈತ ವಿಜ್ಞಾನಿಯು ಲೌಕಿಕವಾಗಿ ಭಕ್ತನಾಗಿ ಕಂಡರೂ ಯೋಗ ಭೋಗ್ಯ ಭಕ್ತಿ ಎಲ್ಲವೂ ಶರೀರವೆಂದು ತನ್ನ ಆತ್ಮವು ನಿರ್ವಿಕಾರ ಸ್ವರೂಪವೆಂದು ನಿಲುಗಡೆಗೊಂಡಿರುವುದರಿಂದ ವಿಕಾರಿಯಾಗಿರುವುದಿಲ್ಲ. ಅವಿಕ್ರಿಯನಾಗಿ ನಿಷ್ಕ್ರಿಯನೂ ಆಗಿರುತ್ತಾನೆ

ಶರೀರದ್ವಯಗಳಿಗೆ ಅಧಿಷ್ಠಾನವಾದ ಚೈತನ್ಯ [illegible] ಶರೀರಾದಿಸಂಘಾತ ಮತ್ತು ಚಿತ್ತವೃತ್ತಿ ಪ್ರತಿಬಿಂಬಿತನಾದ ಚಿದಾಭಾಸ ಈ ಮೂರನ್ನು ಸೇರಿಸಿಕೊಂಡು ನಾನು ನಾನು ಎಂಬ ವ್ಯವಹಾರ ನಡೆಯುತ್ತದೆ. ಈ ನಾನು ಎಂಬ ವಸ್ತುವೇ ಜೀವನು. ಜೀವಾತ್ಮನು = ಅಸ್ಮತ್ [illegible]

ಮಾಯಾಶಬಲತೆಯಿಲ್ಲದೇ ಏನೊಂದು ವ್ಯವಹಾರವೂ ಸಂಭವಿಸುವುದೇ ಇಲ್ಲ [illegible] ಶಿವ. ಅದ್ವೈತ. ವಸ್ತುವು ಮಾತ್ರ ಸ್ವತಸ್ಸಿದ್ಧವೆ

ಅನ್ವಯ= ಸೃಷ್ಟಿಕರ್ತನಿಗೂ ಸೃಷ್ಟ ಜಗತ್ತಿಗೂ ಆಧಾರವಾದ ಅಧಿಷ್ಠಾನವೇ ಬ್ರಹ್ಮ.
ಈ ಕಾರ್ಯಕಾರಣಾಭಾವಕ್ಕೆ ನಿರೂಪಕಸಾಕ್ಷಿಯೇ ಪ್ರತ್ಯಗಾತ್ಮನು (ಜೀವನು)

ತಿಳಿಕೆ= ಇಲ್ಲಿ ಸೃಷ್ಟಕಾರ್ಯವೇ ಇರುವುದಿಲ್ಲ. ಅದರ ಸ್ರಷ್ಟವೂ ಇರುವುದಿಲ್ಲ. ಆದರೆ
ಅವಕ್ಕೆ ಸಾಕ್ಷಿಯಾದ ಪ್ರತ್ಯಗಾತ್ಮನು (ಜೀವನು) ಇದ್ದೇ ಇದ್ದಾನೆ.
ಯಥಾ ಸುಷುಪ್ತಿ ಅಜ್ಞಾನಂ ಶ್ರುತಿ

ಪ್ರಾರಬ್ಧ ಭೋಗವು ಭೋಕ್ತೃವನ್ನು ಮತ್ತನನ್ನಾಗಿ (ಮೋಹಿತನನ್ನಾಗಿ) ಮಾಡುತ್ತದೆ.
ಮದ್ಯಸೇವನೆಯು ಮತ್ತನನ್ನಾಗಿ ಮಾಡುತ್ತದಷ್ಟೆ.
ವಿಷಯವೈರಸ್ಯ - ವೈರಾಗ್ಯವೇ ಪ್ರಬೋಧಕ್ಕೆ ದ್ವಾರವು.
ಭೋಗವು ಭೋಕ್ತೃವನ್ನು ಸ್ವಾಭಾವಿಕವಾಗಿಯೇ ಭೋಗಾಂತರಕ್ಕೆ ಒಡ್ಡುತ್ತದೆ.
ಮೋಹಿತನು ಭೋಗದ ಮೇಲೆ ಭೋಗವನ್ನು ಅನುಭವಿಸುತ್ತಲೇ ಇರುತ್ತಾನೆ. ಜಾಗರೂಕನಾದ ವಿವೇಕಿಯು ಭೋಕ್ತೃವಾಗಿದ್ದರೂ ತಾನು ಭೋಗಾಂತರಕ್ಕೆ ಬಲಿಯಾಗುವುದಿಲ್ಲ. ವಿರಕ್ತನಾಗಿರುತ್ತಾನಷ್ಟೆ.
ಸ್ವಸ್ವರೂಪದಲ್ಲೇ ನಿಲುಗಡೆ ಹೊಂದುವವನಾಗುತ್ತಾನೆ.

ಪ್ರಾರಬ್ಧವನ್ನೇ ಅನುಭವಿಸುತ್ತಾ ಅದನ್ನೇ ಚಿಂತಿಸುತ್ತಾ ಅದನ್ನೇ ಪರಮಾರ್ಥವೆಂದು ಬಗೆಯುತ್ತಾ ವಿಭ್ರಾಂತಿಪಡುತ್ತಿರುವವನಿಗೆ ಅದರ ಅತ್ಯಂತನಾಶ ಗೋಚರವಾಗುವುದೇ ಇಲ್ಲ. ಸೂಕ್ಷ್ಮಬುದ್ಧಿಯಿಂದ ವಿಚಾರಮಾಡುವವನಿಗೆ ಭೋಕ್ತೃವಿಗೆ ನಿರಂತರ ಭೋಗವಿದ್ದರೂ ಆ ಭೋಕ್ತೃವಿಗೂ ಆ ಭೋಗಕ್ಕೂ ಸಾಕ್ಷಿಯಾದ ಆತ್ಮನು ಅಭೋಕ್ತೃವೆಂದೂ, ಆ ಭೋಗವೂ ಭೋಗ್ಯವೂ ಮಿಥ್ಯೆಯೆಂದೂ ತಿಳಿಯುವುದು.

ಸೂರ್ಯನು ಬೆಳಕಿಲ್ಲದ ಪದಾರ್ಥಗಳನ್ನು ಬೆಳಗುವಂತೆ - ಆತ್ಮನು
(ಜ್ಞಾನಜ್ಯೋತಿಯು) ಜ್ಞಾನವಿಲ್ಲದ ವಿಷಯಗಳನ್ನೆಲ್ಲಾ ಅರಿಯುತ್ತಿದ್ದಾನೆ.
ಚೇತನವು ಅರಿವಿಲ್ಲದ ಕಲ್ಪನೆಯನ್ನು ಅರಿಯುತ್ತದೆ.

ಅಪರೋಕ್ಷಾನುಭವವೇ
ಸ್ವಸ್ವರೂಪದ ಯಥಾರ್ಥ (ಜ್ಞಾಪಕವೇ (ಸ್ಮರಣೆಯೇ)) ಮೋಕ್ಷವು.
ಮರೆಯುವುದೇ ಮರೆ = ಅದೇ ಮಾಯೆ. ಅದೇ ಬಂಧವು.

ಒಂದು ಮಡಿಕೆ ಒಡೆಯಿತು ಎಂದರೆ ಒಂದು ಘಟಾಕಾಶವು ಒಡೆಯಿತು ಎನ್ನುವುದಾಗುವುದಿಲ್ಲ
ಗುಣಾತೀತಂ = ನಿರಾಕಾರಂ ಗುಣಾಯಾಮ = ಈ ಮಡಿಕೆಗಳು ಗಡಿಗೆಯೊಳಗೆ ಆಕಾಶವಿದೆ ಎಂ
ದಂತೆ. ಪರಮಾರ್ಥವಾಗಿ ಆಕಾಶದಲ್ಲಿಯೇ ಗಡಿಗೆಯಿರುವುದು. (ಒಳಗೂ ಹೊರಗೂ) ಗಡಿಗೆ
ಆಕಾಶದ ವಿಶೇಷಣವೇ ಆಗಿರುತ್ತದೆ.

ವಿದಿತಾವಿದಿತಾಭ್ಯಾಮನ್ಯ: ಆತ್ಮಾ - ಸ್ವರೂಪವುಳ್ಳದ್ದು = ಪರಮಾರ್ಥ.
ವಿದಿತವಾದದ್ದು ಎಂದರೆ ತಿಳಿದಿರುವುದು ಮತ್ತು ತಿಳಿಯಲು ಶಕ್ಯವಾದದು.
ಸುಖದು:ಖಗಳನ್ನು ವಾಕ್ ಪ್ರಾಣ ಮನೋ ಬುದ್ಧಿಗಳನ್ನು ಮತ್ತು ಈ ಬಾಹ್ಯ (ಪ್ರ)
ಪಂಚವನ್ನು ತಿಳಿಯಲು ಶಕ್ಯವಿದೆ. ಅಥವಾ ತಿಳಿದಿರುತ್ತಾರೆ. ಇದೆಲ್ಲಾ ಆತ್ಮವಲ್ಲ
ಅನಾತ್ಮವೇ = ಸ್ವರೂಪವಿಲ್ಲದವು ಮಾಯೆ. ಅರಿಯದ್ದು ತಪ್ಪು ತಿಳಿದುಕೊಂಡದ್ದು

ಮಾಯೆ ಕಲ್ಪಿಸಿಕೊಂಡದ್ದು

ಅವಿದಿತವಾದದ್ದು ಯಾವುದು ಎಂದರೆ ಅವಿದ್ಯೆ = ಮಾಯೆ. ಅದಕ್ಕೆ ಸ್ವರೂ
ಪವಿಲ್ಲ. ಪರಮಾರ್ಥವು ಇಲ್ಲ. ಅಸತ್ ಆದ್ದರಿಂದಲೇ ಅದನ್ನು ತಿಳಿಯಲು
ಶಕ್ಯವಿಲ್ಲ. ಇಂತಹ ಅಸತ್ಯವಾದ ಮಾಯೆ ಅಥವಾ ಅವಿದ್ಯೆಯು ಆತ್ಮವಲ್ಲ
ಇವೆರಡೂ ಅನಾತ್ಮವೇ. ತದ್ಭಿನ್ನವಾದದ್ದು ಆತ್ಮ = ಕೂಟಸ್ಥ ಸತ್ಯಸ್ವರೂಪ

ವೇದದಲ್ಲಿ ಓಂ ಎಂಬುದು ಮಮ ಎಂಬುದು ಎರಡು ಪಾದವು.

ಭಾವಾಭಾವನಿವು ಕ್ಷೇತ್ರಜ್ಞಂ ವ್ಯಾಪಿತಂ ಜಗತ್॥

5-1
6-2
7-3
8-4

8-5-60

Time Table

DAY	1 st Period	2 nd Period	3 rd Period	4 th Period	5 th Period	6 th Period	7 th Period	8 th Period
MON								
TUE								
WED								
THU								
FRI								
SAT								

Secretary.